RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎಸ್. ಓಲೇಕಾರ | ಸಿಇಒ: ಚಂದ್ರಶೇಖರ ಎಸ್.ಕೆ. | ಸಹ ಸಂಪಾದಕರು: ಶಿವಕುಮಾರ

# ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಸರಣಿ ಅಪಘಾತ, ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ 3 ಗಂಟೆ ರಸ್ತೆ ಬಂದ್ » 2

ಕುಮದ್ವತಿಗೆ ನೀರು ಹರಿಸದಿದ್ದರೆ ರಕ್ತ ಹರಿಸಬೇಕಾದೀತು! » 3

ಮೂತ್ರಪಿಂಡದ ಆರೋಗ್ಯ: ಮೌನವಾಗಿ ಹಾನಿಯಾಗುವ ಮುನ್ನ ಎಚ್ಚರವಾಗಿರಿ » 4

ಸಂಪುಟ (Volume): 1 ಸಂಚಿಕೆ (Issue): 193 ಪುಟ (Page): 4 ದರ Rs. 2 ಮಂಗಳವಾರ 6 ಅಕ್ಟೋಬರ್ 2026 ● 6 OCTOBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

# ಪೋಡಿ ಶುಲ್ಕ ಹೆಚ್ಚಳ

## ರೈತರ ಜೇಬಿಗೆ ಭಾರ । ಶುಲ್ಕ ಏರಿಕೆಗೆ ಆಕ್ರೋಶ

**ಗಣೇಶ ಎಸ್.ಎ ಬ್ಯಾಡಗಿ**

ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆ, ಜೀವನ ನಿರ್ವಹಣೆಯ ವೆಚ್ಚ ಹಾಗೂ ಆರ್ಥಿಕ ಸಂಕಷ್ಟದಿಂದ ಕಂಗೆಟ್ಟಿರುವ ಜನಸಾಮಾನ್ಯರಿಗೆ ರಾಜ್ಯ ಸರಕಾದ ಕಂದಾಯ ಸೇವೆಗಳ ಶುಲ್ಕ ಹೆಚ್ಚಳ ಮತ್ತೊಂದು ಹೊಡೆತ ನೀಡಿದೆ. ಭೂಮಾಪನ ಮತ್ತು ಕಂದಾಯ ಇಲಾಖೆಯ ವಿವಿಧ ಸೇವೆಗಳ ಶುಲ್ಕವನ್ನು ಏಕಾಏಕಿ ಹೆಚ್ಚಿಸಿರುವ ಕ್ರಮ ರೈತರು, ಬಡವರು ಹಾಗೂ ಮಧ್ಯಮ ವರ್ಗದ ಜನರಲ್ಲಿ ಅಸಮಾಧಾನ ಮೂಡಿಸಿದೆ.

ಎಷ್ಟೆಷ್ಟು ಹೆಚ್ಚಳ:ಕಂದಾಯ ಇಲಾಖೆಯ 11ಇ ನಕ್ಷೆ, ಅಲಿನೇಷನ್ ಪೂರ್ವ ನಕ್ಷೆ, ತತ್ಕಾಲ್ ಪೋಡಿ ಹಾಗೂ ಹದ್ದುಬಸ್ತು ಸೇರಿದಂತೆ ಜನರಿಗೆ ಅತ್ಯಗತ್ಯವಾಗಿರುವ ಸೇವೆಗಳ ಶುಲ್ಕದಲ್ಲಿ ಭಾರಿ ಏರಿಕೆ ಮಾಡಲಾಗಿದೆ. ನಗರ ಪ್ರದೇಶದ 11ಇ ನಕ್ಷೆ, ಅಲಿನೇ ಷನ್ ಪೂರ್ವನಕ್ಷೆ ಹಾಗೂ ತತ್ಕಾಲ್ ಪೋಡಿ ಸೇವೆಗೆ ಈ ಹಿಂದೆ 1,000 ಇದ್ದ ಶುಲ್ಕವನ್ನು 3,200ಕ್ಕೆ ಹೆಚ್ಚಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ 400 ಇದ್ದ ಶುಲ್ಕ ಇದೀಗ 2,300ಕ್ಕೆ ಏರಿಕೆಯಾಗಿದೆ.

ಇನ್ನು ನಗರ ಪ್ರದೇಶದ ಹದ್ದುಬಸ್ತು ಸೇವೆಗೆ ಈ ಹಿಂದೆ 300 ಇದ್ದ ಶುಲ್ಕವನ್ನು 2,500ಕ್ಕೆ ಹೆಚ್ಚಿಸಲಾಗಿದ್ದು, ಗ್ರಾಮೀಣ ಪ್ರದೇಶದ ಹದ್ದುಬಸ್ತು ಶುಲ್ಕ 300ರಿಂದ 1,000ಕ್ಕೆ ಏರಿಕೆಯಾಗಿದೆ. ಈ ಹಿಂದೆ ಯಾವುದೇ ಶುಲ್ಕವಿಲ್ಲದ ನೋಟಿಸ್‌ಗೂ ಈಗ 35 ನಿಗದಿ ಪಡಿಸಲಾಗಿದೆ. ಒಟ್ಟಾರೆ ಕಂದಾಯ ಸೇವೆಗಳ ಶುಲ್ಕದಲ್ಲಿ ಸರಾಸರಿ ಶೇ.733ರಷ್ಟು ಹೆಚ್ಚಳವಾಗಿದೆ ಎಂಬ ಆರೋಪ ಕೇಳಿಬಂದಿದೆ.

2022ರ ಬಳಿಕ ಮತ್ತೆ ಶುಲ್ಕದ ಬರೆ:ಈ ಕಂದಾಯ ಸೇವೆಗಳ ಶುಲ್ಕವನ್ನು ಈ ಹಿಂದೆ 2022ರಲ್ಲಿ ಹೆಚ್ಚಿಸಲಾಗಿತ್ತು. 2024ರಲ್ಲಿ ಮತ್ತೊಮ್ಮೆ ಶುಲ್ಕ ಏರಿಕೆಗೆ ಮುಂದಾದಾಗ ಸಾರ್ವಜನಿಕರು ಹಾಗೂ ರೈತರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಪರಿಣಾಮವಾಗಿ ಆ ಪ್ರಸ್ತಾವನೆಯನ್ನು ಕೈಬಿಡಲಾಗಿತ್ತು. ಇದೀಗ ಮತ್ತೆ ಶುಲ್ಕ ಹೆಚ್ಚಳದ ನಿರ್ಧಾರ ಕೈಗೊಂಡಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಕೆ.2 ಚಲನ್ ಮೂಲಕ ನೇರವಾಗಿ ರಾಜ್ಯ ಸರಕಾಕ್ಕೆ ಶುಲ್ಕ ಪಾವತಿಸುವ ವ್ಯವಸ್ಥೆಯಡಿ ಸೇವೆಗಳನ್ನು ಒದಗಿ ಸುವ ಉದ್ದೇಶ ವಿದ್ದರೂ, ಏಕಾಏಕಿ ಇಷ್ಟೊಂದು ಪ್ರಮಾಣದಲ್ಲಿ ಶುಲ್ಕ ಹೆಚ್ಚಿಸಿರುವುದು ಎಷ್ಟು ಸಮಂಜಸ ಎಂಬ ಪ್ರಶ್ನೆ ಎದುರಾಗಿದೆ.

ಲಂಚ ತಡೆಯಲು ಶುಲ್ಕ ಹೆಚ್ಚಳವೇ? ಪರಿಹಾರವೇ?:ಕಂದಾಯ ಸೇವೆಗಳ ಶುಲ್ಕ ಹೆಚ್ಚಳಕ್ಕೆ ಲಂಚದ ಹಾವಳಿ ತಡೆಗಟ್ಟುವುದು ಹಾ ಗೂ ಪರವಾನಗಿ ಪಡೆದ ಭೂಮಾಪಕರಿಗೆ ಹೆಚ್ಚಿನ ಶುಲ್ಕ ಒದಗಿಸುವುದು ಪ್ರಮುಖ ಕಾರಣಗಳೆಂದು ಹೇಳಲಾಗುತ್ತಿದೆ. ಆದರೆ ಶು ಲ್ಕ ಹೆಚ್ಚಳದಿಂದ ಮಾತ್ರ ಲಂಚದ ಹಾವಳಿ ನಿಲ್ಲುತ್ತದೆಯೇ ಎಂಬ ಪ್ರಶ್ನೆ ಸಾರ್ವಜನಿಕರನ್ನು ಕಾಡುತ್ತಿದೆ. ಸರಕಾರಿ ಕಚೇರಿಗಳಲ್ಲಿ ಅರ್ಜಿ ಸಲ್ಲಿಸಿದರೂ ಸಣ್ಣಪುಟ್ಟ ಕಾರಣಗಳನ್ನು ಮುಂದಿಟ್ಟುಕೊಂಡು ಅರ್ಜಿಗಳನ್ನು ತಿರಸ್ಕರಿಸುವುದು ಅಥವಾ ಕೆಲಸ ಮಾಡಿ ಕೊಡಲು ಅನಗತ್ಯ ವಿಳಂಬ ಮಾಡುವಂತಹ ಸಮಸ್ಯೆಗಳಿಗೆ ಕಡಿವಾಣ ಹಾಕದಿದ್ದರೆ, ಹೆಚ್ಚುವರಿ ಶುಲ್ಕದ ಹೊರೆ ಜನರ ಮೇಲಷ್ಟೇ ಬೀಳಲಿದೆ ಎಂಬ ಆತಂಕ ವ್ಯಕ್ತವಾಗುತ್ತಿದೆ.




**ಸರಕಾರವು ರೈತರ ಹಾಗೂ ಜನರ ಅನುಕೂಲಕ್ಕಾಗಿ ಕಂದಾಯ ಸೇವೆಗಳನ್ನು ಸರಳಗೊಳಿಸಬೇಕೇ ಹೊರತು, ಇದರಿಂದ ಸಾಮಾನ್ಯ ಜನರಿಗೆ ಆರ್ಥಿಕ ಹೊರೆಯಾಗಬಾರದು. ಶುಲ್ಕ ಹೆಚ್ಚಳದ ನಿರ್ಧಾರವನ್ನು ಸರಕಾರ ಮರುಪರಿಶೀಲಿಸಿ, ಬಡವರು ಮತ್ತು ಸಣ್ಣ ರೈತರಿಗೆ ರಿಯಾಯಿತಿ ನೀಡುವುದರ ಜತೆಗೆ, ಕಂದಾಯ ಸೇವೆಗಳಲ್ಲಿ ಪಾರದರ್ಶಕತೆ ತರಲಿ. ಇಲ್ಲದಿದ್ದರೇ ಹೋರಾಟ್ಯ ಅನಿವರ್ಯ.**

**। ಮಲ್ಲಿಕಾರ್ಜುನ ಬಳ್ಳಾರಿ ರೈತ ಮುಖಂಡ**

**ಸರಕಾರ ಅ.1ರಿಂದ ಭೂಮಾಪನ ಮತ್ತು ಕಂದಾಯ ಇಲಾಖೆಯ ವಿವಿಧ ಸೇವೆಗಳ ಶುಲ್ಕವನ್ನು ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. ಅದರನ್ವಯ ಶುಲ್ಕ ಭರಣ ಮಾಡಿಸಿಕೊಳ್ಳಲಾಗುತ್ತಿದೆ.**

**। ನಜೀರಹಮ್ಮದ ತಹಸೀಲ್ದಾರ, ಭೂದಾಖಲೆಗಳ ಸಹಾಯಕ ನಿರ್ದೇಶಕರು ಬ್ಯಾಡಗಿ.**

ಅಣ್ಣತಮ್ಮಂದಿರ ಜಮೀನು ಹಂಚಿಕೆಗೂ ಸಾವಿರಾರು ರೂಪಾಯಿ!ಒಂದು ಎಕರೆ ಜಮೀನನ್ನು ಅಣ್ಣತಮ್ಮಂದಿರು ತಮ್ಮೊಳಗೆ ಹಂಚಿ ಕೊಂಡು ಪ್ರತ್ಯೇಕ ಪೋಡಿ ಮಾಡಿಸಿಕೊಳ್ಳಬೇಕೆಂದರೂ ಈಗ ಸಾವಿರಾರು ರೂಪಾಯಿ ಶುಲ್ಕ ಪಾವತಿಸಬೇಕಾದ ಪರಿಸ್ಥಿತಿ ಎದುರಾಗಬಹುದಾಗಿದೆ. ಆರ್ಥಿಕವಾಗಿ ಅನುಕೂಲಸ್ಥರು ಹಣ ಪಾವತಿಸಿ ಕೆಲಸ ಮಾಡಿಸಿಕೊಳ್ಳಬಹುದು. ಆದರೆ ದಿನನಿತ್ಯದ ದುಡಿಮೆ ಯನ್ನೇ ನಂಬಿಕೊಂಡಿರುವ ಬಡ ರೈತರು, ಸಣ್ಣ ಹಿಡುವಳಿದಾರರು ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳು ಇಷ್ಟೊಂ ದು ಹಣವನ್ನು ಎಲ್ಲಿಂದ ಹೊಂದಿಸಬೇಕು ಎಂಬುದು ಸಂಕಷ್ಟ ತಂದೊಡ್ಡಿದೆ.

# ಕೋಲಾರ ಕಾಂಗ್ರೆಸ್‌ನಲ್ಲಿ ಕೋಲಾಹಲ

## ಡಿಸಿಸಿ ಬ್ಯಾಂಕ್ ಎಂಡಿ ವಿಚಾರ ತಾರಕಕ್ಕೆ । ಕೋಲಾರ, ಕೆಜಿಎಫ್ ಎಂಎಲ್‌ಎ ಕದನ

**ಬೆಂಗಳೂರು:** ಕೋಲಾರ ಜಿಲ್ಲೆಯ ಕಾಂಗ್ರೆಸ್ ಶಾಸಕರ ನಡುವೆ ಭಿನ್ನಾಭಿಪ್ರಾಯ ತೀವ್ರಗೊಂಡಿದೆ. ಈ ನಡುವೆ ಶಾಸಕ ಕೊತ್ತೂರು ಮಂಜುನಾಥ್ ಸಿಎಂ ಡಿಕೆ ಶಿವಕುಮಾರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಇದೇ ಸಂದರ್ಭದಲ್ಲಿ ತಮ್ಮ ಬೆಂಬಲಿಗರನ್ನು ಒಳಗಡೆ ಬಿಟ್ಟಿಲ್ಲ ಎಂಬ ಕಾರಣಕ್ಕಾಗಿ ಕೊತ್ತೂರು ಮಂಜುನಾಥ್ ಅವರು ಪೊಲೀಸರನ್ನು ತರಾಟೆಗೆ ತೆಗೆದುಕೊಂಡ ಘಟನೆಯೂ ನಡೆಯಿತು.

ಸೋಮವಾರ ಸಿಎಂ ಡಿಕೆ ಶಿವಕುಮಾರ್ ಅವರು ಮಂಜುನಾಥ್ ಅವರು ಭೇಟಿ ಮಾಡಿ ಕೆಲ ಹೊತ್ತು ಮಾತುಕತೆ ನಡೆಸಿದರು. ಇದೇ ಸಂದರ್ಭದಲ್ಲಿ ಕೊತ್ತರು ಮಂಜುನಾಥ್ ಮಾತನಾಡಿ, ನಾವು ಕೋಲಾರ, ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ಬಗ್ಗೆ ಮಾತಾಡೋಕೆ ಬಂದಿದ್ದೆವು. ಡಿಸಿಸಿ ಬ್ಯಾಂಕ್ ವಿಚಾರವಾಗಿ ಸಿಎಂ ಬಳಿ ಮಾತನ್ನಾಡಲು ಬಂದಿದ್ದೆವು. ಅದು ಎರಡು ಜಿಲ್ಲೆಯ ಬ್ಯಾಂಕ್ ಆಗಿದೆ, ಸಿಎಂ ಜೊತೆ ನಿನ್ನೆ ಚರ್ಚೆ ಮಾಡಿದ್ದೇವೆ ಎಂದರು.

ಇಂದು ಎಂಡಿಯವರನ್ನ ಕರೆದುಕೊಂಡು ಬಂದು ಪರಿಸ್ಥಿತಿ ಬಗ್ಗೆ ಮಾಹಿತಿ ಕೊಟ್ಟಿದ್ದೇವೆ. ಅಪೆಕ್ಸ್ ಬ್ಯಾಂಕ್ ಗೆ 317 ಕೋಟಿ ಹಣ ಕಟ್ಟಬೇಕಿದೆ. ಬ್ಯಾಂಕ್ ಸುಸ್ತಿಯಾಗಿದೆ, ಬರ ಇದೆ, ರೈತರಿಗೆ ಬ್ಯಾಂಕ್ ನಿಂದ



ಸಹಾಯ ಮಾಡಬೇಕು. ಮೂರು ವರ್ಷದಿಂದ ಆಡಿಟಿಂಗ್ ಆಗಿಲ್ಲಾ . ದುಡ್ಡು ರಿಕವರಿ ಅಗ್ತಿಲ್ಲಾ, ಆಗ ಸುಸ್ತಿಯಿಂದ ಆಚೆ ಬರಬಹುದು. ಅದಕ್ಕೆ ಸರ್ಕಾರದಿಂದ ಸಹಾಯ ಬೇಕು ಎಂದಿದ್ದೇವೆ ಎಂದರು.

ಎಂಡಿ ಬದಲಾಯಿಸಲು ಕೆಜಿಎಫ್ ಶಾಸಕರ ಪಟ್ಟು ವಿಚಾರವಾಗಿ ಇದೇ ವೇಳೆ ಮಾತನಾಡಿದ ಅವರು, ಕೆಜಿಎಫ್ ಶಾಸಕರು ಎಂಡಿಯವರನ್ನ ಬೇಡ ಅಂತಿದ್ದಾರೆ. ನಾವೆಲ್ಲಾ ಅವರೇ ಇರಲಿ ಎಂದಿದ್ದೇವೆ, ಸಿಎಂ ಒಪ್ಪಿಕೊಂಡಿದ್ದಾರೆ ಎಂದು ಸ್ಪಷ್ಟಪಡಿಸಿದರು.

ನಾನು ಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿದ್ದೇನೆ, ಕೆಜಿಎಫ್ ಶಾಸಕರು ನಿರ್ದೇಶಕರಿದ್ದಾರೆ. ಕೆಲಸ ಮಾಡೋರು ನಾವು. ಅಲ್ಲಿನ ಕ್ಷೇತ್ರದ ಶಾಸಕನು ನಾನು ತಾನೇ. ನನಗೆ ಕೆಲಸ ಮಾಡೋಕೆ ಅವಕಾಶ ನೀಡಿ ಎಂದು ಕೊತ್ತೂರು ಮಂಜುನಾಥ್ ಆಗ್ರಹಿದರು.

### ಗರಂ ಆಗಿದ್ದಕ್ಕೆ ಸ್ಪಷ್ಟನೆ

**ಸಿಎಂ ಮನೆ ಬಳಿ ಪೊಲೀಸರಿಗೆ ಅವಾಜ್ ಹಾಕಿರುವ ವಿಚಾರವಾಗಿ ಮಾತನಾಡಿ, "ಪೊಲೀಸರಿಗೆ ಗದರಿಲ್ಲಾ, ಡೀಟೆಲ್ಸ್ ಬರೆದುಕೊಂಡು ಬಿಡಿ ಅಂತ ಹೇಳಿದ್ದೆ. ನೂರು ಜನ ಅಂತಾ ಹೇಳಿಲ್ಲ, ಮೂರು ಜನ ಅಂದಿದ್ದೆ. ಪೊಲೀಸರಿಗೆ ನಾನು ಗದರಿಲ್ಲ" ಎಂದು ಸಷ್ಟಪಡಿಸಿದರು. ಒಟ್ಟಿನಲ್ಲಿ ಕೋಲಾರ ಜಿಲ್ಲೆಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕೊತ್ತೂರು ಮಂಜುನಾಥ್ ಅವರು ಸಿಎಂ ಡಿಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿರುವುದು ಕುತೂಹಲ ಕೆರಳಿಸಿದೆ.**

# ಫೈಜರ್ ಕಂಪನಿಯ ಅಸಲಿ ಲೇಬಲ್ ತರಿಸಿ ನಕಲಿ ಔಷಧಗಳಿಗೆ ಬಳಕೆ

**ಬೆಂಗಳೂರು:** ನಕಲಿ ಔಷಧ ಮಾರಾಟ ದಂಧೆಯ ಪ್ರಮುಖ ಆರೋಪಿ ಪ್ರಶಾಂತ್ ರಾಜನ್ ಬಾಬು, ಟರ್ಕಿಯಿಂದ ಫೈಜರ್ ಕಂಪನಿಯ ಅಸಲಿ ಲೇಬಲ್‌ಗಳನ್ನು ತರಿಸಿ ನಕಲಿ ಔಷಧಗಳಿಗೆ ಬಳಸಿರುವುದು ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಯಲ್ಲಿಪತ್ತೆಯಾಗಿದೆ.

ಪ್ರಶಾಂತ್ ಮತ್ತು ಪ್ರಕರಣದ ಇತರೆ ಆರೋಪಿಗಳು, ಅಸಲಿ ಔಷಧಗಳ ಜತೆಗೆ ನಕಲಿ ಔಷಧಗಳನ್ನು ಜೋಡಿಸಿ ಸರಬರಾಜು ಮಾಡುತ್ತಿದ್ದರು. ಮಧ್ಯವರ್ತಿಗಳ ಮೂಲಕ ಕ್ಯಾನ್ಸರ್ ಮತ್ತು ಜೀವರಕ್ಷಕ ಔಷಧ ಸೇರಿದಂತೆ ವಿವಿಧ ಮಾದರಿಯ ಔಷಧಗಳ ಲೇಬಲ್‌ಗಳನ್ನು ಟರ್ಕಿಯಿಂದ ತರಿಸಿಕೊಳ್ಳುತ್ತಿದ್ದರು.

ಬಿಡದಿಯ ಫಾರ್ಮ್ ಹೌಸ್‌ಗೆ ಹೊರ ರಾಜ್ಯಗಳಿಂದ ಕಚ್ಚಾ ಸಾಮಗ್ರಿಗಳು ಪೂರೈಕೆ ಆಗುತ್ತಿದ್ದವು. ಅಲ್ಲಿಅಸಲಿ ಔಷಧದೊಂದಿಗೆ ನಕಲಿ ಔಷಧಗಳನ್ನು ಬೆರೆಸಲಾಗುತ್ತಿತ್ತು. ನಂತರ ಅಲ್ಲಿಯೇ ಮರು ಪ್ಯಾಕಿಂಗ್ ಮಾಡಿ, ಲೇಬಲ್ ಅಂಟಿಸಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳು ಮತ್ತು ಕ್ಲಿನಿಕ್‌ಗಳಿಗೆ ಪೂರೈಕೆ ಮಾಡುತ್ತಿದ್ದರು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಪ್ರಶಾಂತ್, ಫೈಜರ್ ಕಂಪನಿಯ ಒರಿಜಿನಲ್ ಲೇಬಲ್ ತರುವುದಕ್ಕಾಗಿಯೇ ವರ್ಷದಲ್ಲಿಹತ್ತಾರು ಬಾರಿ ಟರ್ಕಿಗೆ ಹೋಗಿ ಬಂದಿದ್ದ. ನಿರಂತರ ಭೇಟಿಯ ಕಾರಣಕ್ಕೆ ಆತನ ಟರ್ಕಿ ವೀಸಾ ರದ್ದುಪಡಿಸಲಾಗಿತ್ತು. ಹೀಗಾಗಿ, ಆತ ಟರ್ಕಿಯ ಅಕ್ಕಪಕ್ಕದ ದೇಶಗಳಿಗೆ ಹೋಗಲು ಆರಂಭಿಸಿದ್ದ. ಅಜರ್ ಬೈಜಾನ್ ಸೇರಿದಂತೆ ಬೇರೆ ಬೇರೆ ದೇಶಗಳಿಗೆ ಹೋಗಿದ್ದ ಎಂದು ಮೂಲಗಳು ಹೇಳಿವೆ.

**ಮಧ್ಯವರ್ತಿಗಳ ಮೂಲಕ ಡೀಲ್:** ಪ್ರಶಾಂತ್, ಮಧ್ಯವರ್ತಿಗಳ ಮೂಲಕ ಟರ್ಕಿಯಿಂದ ಫೈಜರ್ ಕಂಪನಿಯ ಔಷಧಗಳ ಅಸಲಿ ಲೇಬಲ್ ತರಿಸಿಕೊಳ್ಳುತ್ತಿದ್ದ. ಆ ಲೇಬಲ್‌ಗಳನ್ನು ನಕಲಿ ಔಷಧಗಳಿಗೆ ಅಂಟಿಸಿ ಪ್ಯಾಕಿಂಗ್ ಮಾಡಲಾಗುತ್ತಿತ್ತು. ಆರೋಪಿಗಳು ಬೆಂಗಳೂರು ನಗರದಲ್ಲೆ ವರ್ಷದಲ್ಲಿ15 ಕೋಟಿ ರೂ.ಗೂ ಹೆಚ್ಚು ಮೌಲ್ಯದ ನಕಲಿ ಔಷಧ ಪೂರೈಕೆ ಮಾಡಿರುವ ಶಂಕೆಯಿದೆ.

ಆರೋಪಿಗಳಾದ ಪ್ರಶಾಂತ್ ಮತ್ತು ವೀರೇಶ್‌ಕುಮಾರ್ ಜೈನ್ ನಕಲಿ ಹಾಗೂ ಅವಧಿ ಮುಗಿದ ಔಷಧ ಮಾರಾಟ ಜಾಲವನ್ನು ವಿದೇಶಕ್ಕೂ ವಿಸ್ತರಣೆ ಮಾಡಿದ್ದರು ಎಂದು ಎಸ್‌ಐಟಿ ಅಧಿಕಾರಿಗಳು ಹೇಳಿದ್ದಾರೆ.

# ನೈಸ್ ಅಕ್ರಮ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಣೆ

**ಬೆಂಗಳೂರು:** ನೈಸ್ ರಸ್ತೆ ಯೋಜನೆಯಲ್ಲಿ ಅಕ್ರಮ ನಡೆದಿರುವ ವಿಚಾರವಾಗಿ ತನಿಖೆ ನಡೆಸಲು ಹೈಕೋರ್ಟ್ ನೀಡಿದ್ದ ಆದೇಶಕ್ಕೆ ತಡೆಯಾಜ್ಞೆ ನೀಡಲು ಸುಪ್ರಿಂ ಕೋರ್ಟ್ ನಿರಾಕರಿಸಿದೆ. ಹೈಕೋರ್ಟ್ ಆದೇಶವನ್ನು ಪ್ರಶ್ನೆ ಮಾಡಿ ನೈಸ್ ಸಂಸ್ಥೆ ಸುಪ್ರೀಂ ಕೋರ್ಟ್ ಕದ ತಟ್ಟಿತ್ತು. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸೋಮವಾರ ಮೇಲ್ಮನವಿ ವಿಚಾರಣೆಯ ಸಂದರ್ಭದಲ್ಲಿನೈಸ್ ರಸ್ತೆಗಾಗಿ ಕೆಐಎಡಿಬಿ ಭೂಸ್ವಾಧೀನವಿಚಾರವಾಗಿ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಣೆ ಮಾಡಿದೆ. ವಿಚಾರಣೆ ಆಗದೆ ಮಧ್ಯಂತರ ತಡೆ ನೀಡಲು ಸಾಧ್ಯವಿಲ್ಲ ಎಂದು ನೇರವಾಗಿ ಹೇಳಿದೆ. ಅಲ್ಲದೆ, ನವೆಂಬರ್ 2 ಕ್ಕೆ ವಿಚಾರಣೆ ಮುಂದೂಡಿದೆ.

ನೈಸ್ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಆರೋಪ ಪ್ರತ್ಯಾರೋಪಗಳು ತೀವ್ರಗೊಳ್ಳುತ್ತಿದೆ. ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ನೈಸ್ ಅಕ್ರಮದ ಬಗ್ಗೆ ಸರಣಿಯಾಗಿ ದಾಖಲೆ ಬಿಡುಗಡೆ ಮಾಡಿದ್ದಾರೆ. ಅಲ್ಲದೆ, ಸಿಎಂ ಡಿಕೆ ಶಿವಕುಮಾರ್ ವಿರುದ್ದವಾಗಿಯೂ ಆರೋಪ ಮಾಡಿದ್ದಾರೆ.

ಇದೇ ಸಂದರ್ಭದಲ್ಲಿ ನೈಸ್ ಭೂಸ್ವಾಧೀನದ ವಿರುದ್ಧ ರೈತರು ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯ ಸಂದರ್ಭದಲ್ಲಿ ನೈಸ್ ಅಕ್ರಮದ ಬಗ್ಗೆ ತನಿಖೆ ಅಗತ್ಯ ಎಂದು ಹೈಕೋರ್ಟ್ ಹೇಳಿತ್ತು. ಈ ಮೂಲಕ ರೈತರಿಗೆ ಬಿಗ್ ರಿಲೀಫ್ ನೀಡಿತ್ತು.

ಆದರೆ ಹೈಕೋರ್ಟ್ ಆದೇಶವನ್ನು ಪ್ರಶ್ನೆ ಮಾಡಿ ನೈಸ್ ಸಂಸ್ಥೆ ಸುಪ್ರೀಂ ಕೋರ್ಟ್ ಕದ ತಟ್ಟಿತ್ತು. ಇದೀಗ ಮೇಲ್ಮನವಿ ಅರ್ಜಿಗಳ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ನಿರಾಕರಿಸಿದೆ. ಈ ಮೂಲಕ ರೈತರಿಗೆ ಮತ್ತಷ್ಟು ಬಲ ಬಂದಂತಾಗಿದೆ. ಅಲ್ಲದೆ, ನೈಸ್‌ಗೆ ತಕ್ಕಮಟ್ಟಿಗೆ ಹಿನ್ನಡೆ ಉಂಟಾಗಿದೆ.



**ನಿರಂತರ ವಾಗ್ದಾಳಿ ನಡೆಸುತ್ತಿರುವ ಎಚ್‌ಡಿಕೆ:** ನೈಸ್ ರಸ್ತೆಗಾಗಿ ಭೂಮಿ ಕಳೆದುಕೊಂಡ ಸಂತ್ರಸ್ತ ರೈತರನ್ನು ಭೇಟಿ ಮಾಡಿದ್ದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಶನಿವಾರವೂ ಈ ಸಂಬಂಧ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿಯನ್ನು ನಡೆಸಿದ್ದರು.

ಬೆಂಗಳೂರಿನ ಹೊಸಕೆರೆಹಳ್ಳಿಟೋಲ್ ಬಳಿ ಇರುವ ಶೋಭಾ ಅಪಾರ್ಟ್ಮೆಂಟ್ ಯಾರದು? ಅದಕ್ಕೆ ಹಾಲಿ ಮುಖ್ಯಮಂತ್ರಿ ಸಿಎಂ ಅವರ ಕುಟುಂಬ, ಮತ್ತು ಅವರ ಸಹೋದರ ಡಿ.ಕೆ. ಸುರೇಶ್ ಅವರಿಗೂ ಏನು ಸಂಬಂಧ? ಎಂದು ಪ್ರಶ್ನಿಸಿದ್ದರು.

ಅಮಾಸೆಗೌಡ, ಭಾಗ್ಯಲಕ್ಷ್ಮಿ, ಕೆಂಪೇಗೌಡ ಅನ್ನುವವರು ಯಾರು? ಈ ಮುಖ್ಯಮಂತ್ರಿ ತಮ್ಮಮತ್ತುತಾಯಿಹೆಸರಿಗೆಆಭೂಮಿಯನ್ನು ಖರಿಸಿದ್ದು ಹೇಗೆ? ಎಂದು ಪ್ರಶ್ನೆ ಮಾಡಿದ್ದರು.

ಒಮ್ಮೆ ಸರ್ಕಾರಿ ಯೋಜನೆಗೆ ನೋಟಿಫೈ ಆಗಿರುವ ಭೂಮಿಯನ್ನು ಇವರು ಖರೀದಿಸಲು ಹೇಗೆ ಸಾಧ್ಯವಾಯಿತು? ಅದಕ್ಕೆ ಎನ್‌ಒಸಿ ಹೇಗೆ ಸಿಕ್ಕಿತು? ಅಲ್ಲಿ ಕಟ್ಟಲಾಗಿರುವ ಗಗನಚುಂಬಿ ಶೋಭಾ ಅಪಾರ್ಟ್ಮೆಂಟ್ ಮೂಲಕ ಅವರು ಎರಡು ಸಾವಿರ ಕೋಟಿ ಮೌಲ್ಯದ ಆಸ್ತಿಯನ್ನು ಮಾಡಿದ್ದಾರೆ ಎಂದು ದೂರಿದ್ದರು.

# ಮಹರ್ಷಿ ವಾಲ್ಮೀಕಿ ಜಯಂತಿ 25ರ ಬದಲು 26ರಂದು ಆಚರಣೆ, ಅಂದು ಸರ್ಕಾರಿ ರಜೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಜಯಂತಿಯ ಸಾರ್ವತ್ರಿಕ ರಜೆ ದಿನಾಂಕವನ್ನು ಬದಲಾಯಿಸಿ ಕರ್ನಾಟಕ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಈ ಹಿಂದೆ ನಿಗದಿಪಡಿಸಲಾಗಿದ್ದ ದಿನಾಂಕದ ಬದಲಾಗಿ, ಅಕ್ಟೋಬರ್ 26ರ ಸೋಮವಾರದಂದು ವಾಲ್ಮೀಕಿ ಜಯಂತಿ ಆಚರಿಸಲು ಹಾಗೂ ಅಂದು ಸಾರ್ವತ್ರಿಕ ರಜೆ ನೀಡಲು ಸರ್ಕಾರ ತೀರ್ಮಾನಿಸಿದೆ.



ಸರ್ಕಾರದ ಹಿಂದಿನ ಅಧಿಸೂಚನೆಯನ್ವಯ 2026ನೇ ಸಾಲಿನ ಸಾರ್ವತ್ರಿಕ ರಜಾ ದಿನಗಳ ಪಟ್ಟಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು 2026ರ ಅಕ್ಟೋಬರ್ 25ರ ಭಾನುವಾರದಂದು ಘೋಷಿಸಲಾಗಿತ್ತು. ಆದರೆ, ವಾಲ್ಮೀಕಿ ಜಯಂತಿಯನ್ನು 'ಶೀಗಿಹುಣ್ಣಿಮೆ'ದಿನದಂದೇ ಆಚರಿಸುವ ಸಂಪ್ರದಾಯ ವಿರುವುದರಿಂದ, ಅಕ್ಟೋಬರ್ 26ರ ಸೋಮವಾರದಂದು ಶೀಗಿ ಹುಣ್ಣಿಮೆ ಬಂದ ಹಿನ್ನೆಲೆಯಲ್ಲಿ ಅಂದೇ ಜಯಂತಿಯನ್ನು ಆಚರಿಸಲು ಮತ್ತು ಸಾರ್ವತ್ರಿಕ ರಜೆ ನೀಡಲು ಆದೇಶಿಸಲಾಗಿದೆ.

**ಸರಣಿ ರಜೆ**

**ಅಕ್ಟೋಬರ್ 24 – 4ನೇ ಶನಿವಾರ ಸರ್ಕಾರಿ ರಜೆ**

**ಅಕ್ಟೋಬರ್ 25 – ಭಾನುವಾರ ರಜೆ**

**ಅಕ್ಟೋಬರ್ 26 – ವಾಲ್ಮೀಕಿ ಜಯಂತಿ ರಜೆ**

**ಬ್ಯಾಂಕ್‌ಗಳಿಗೂ ರಜೆ ಅನ್ವಯ:** ಈ ರಜೆಯು ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ್ ಆಕ್ಟ್, 1881ರ ಸೆಕ್ಷನ್ 25ರ ವಿವರಣೆಯನ್ವಯವೂ ಅನ್ವಯವಾಗಲಿದ್ದು, ಅಕ್ಟೋಬರ್ 26ರ ಸೋಮವಾರದಂದು ರಾಜ್ಯದ ಸರ್ಕಾರಿ ಕಚೇರಿಗಳು, ಶಾಲೆ–ಕಾಲೇಜುಗಳ ಜೊತೆಗೆ ಬ್ಯಾಂಕ್‌ಗಳಿಗೂ ಸಾರ್ವತ್ರಿಕ ರಜೆ ಇರಲಿದೆ.

**ಅಧಿಕೃತ ಆದೇಶ:** ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ರವಿಕುಮಾರ್ ಎಸ್. ಅವರು ಈ ಸಂಬಂಧ ಅಧಿಸೂಚನೆ ಹೊರಡಿಸಿದ್ದಾರೆ.

**ಸಿಗಲಿದೆ 3 ದಿನ ಸರಣಿ ರಜೆ:** ವಾಲ್ಮೀಕಿ ಜಯಂತಿ ದಿನಾಂಕ ಬದಲಾವಣೆಯಿಂದ ಮೂರು ದಿನ ಸರಣಿ ರಜೆ ಸಿಗಲಿದೆ. ಅಕ್ಟೋಬರ್ ಮೊದಲ ವಾರದಂತೆ ಕೊನೆಯ ವಾರವೂ ಜನರಿಗೆ ಲಾಗ್ ವೀಕೆಂಡ್ ಇರಲಿದೆ.

# ನನ್ನಂತೆ ಯತೀಂದ್ರಗೂ ಆಶೀರ್ವಾದ ಮಾಡಿ

**ಮೈಸೂರು:** ನನಗೆ ಆಶೀರ್ವಾದ ಮಾಡಿದಂತೆ ಯತೀಂದ್ರಗೂ ಆಶೀರ್ವಾದ ಮಾಡಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಭಾವುಕರಾಗಿ ತಮ್ಮ ಕ್ಷೇತ್ರ ವರುಣಾದ ಜನತೆಗೆ ಮನವಿ ಮಾಡಿದ್ದಾರೆ. ಈ ಮೂಲಕ 2028ರ ಚುನಾವಣೆಯಲ್ಲಿ ತಾವು ವರುಣ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂಬ ಸುಳಿವು ನೀಡಿದ್ದಾರೆ.

ಸಿಎಂ ಸ್ಥಾನದಿಂದ ಕೆಳಗಿಳಿದ ನಂತರ ಇದೇ ಮೊದಲ ಬಾರಿಗೆ ತಮ್ಮ ಕ್ಷೇತ್ರ ವರುಣಗೆ ಭೇಟಿ ನೀಡಿದ ಸಿದ್ದರಾಮಯ್ಯ ಅವರು, ದಾಸನೂರು ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳ ಶಂಕುಸ್ಥಾಪನೆ ನೆರವೇರಿಸಿದರು.

ಬಳಿಕ ಮಾತನಾಡಿದ ಮಾಜಿ ಸಿಎಂ ಸಿದ್ದರಾಮಯ್ಯ, "ರಾಜ್ಯದಲ್ಲಿ ಭೀಕರ ಬರಗಾಲ ಇದೆ. 150 ವರ್ಷಗಳಲ್ಲೇ ಅತಿ ದೊಡ್ಡ ಭೀಕರ ಬರ ಇದಾಗಿದೆ. 220 ತಾಲೂಕು ಈ ಹೊಡೆತಕ್ಕೆ ಸಿಲುಕಿವೆ. ಇಂತಹ ಪರಿಸ್ಥಿತಿಯಿದ್ದರೂ ಗ್ಯಾರಂಟಿ ಯೋಜನೆಯಿಂದ ಜನ ನೆಮ್ಮದಿ ಆಗಿದ್ದಾರೆ. ನಾನು ರಾಜ್ಯದಲ್ಲಿ ಎಂಟು ವರ್ಷಗಳ ಕಾಲ ಮುಖ್ಯಮಂತ್ರಿ ಆಗಿ ಸೇವೆ ಸಲ್ಲಿಸಿದ್ದೇನೆ. ರಾಹುಲ್ ಗಾಂಧಿ ಯಾವಾಗ ಹೇಳ್ತಾರೆ, ಅಂದೇ ಸಿಎಂ ಸ್ಥಾನವನ್ನು ಬಿಡುತ್ತೇನೆ ಎಂದು ನಾಲ್ಕೈದು ಬಾರಿ ಹೇಳಿದ್ದೆ. ಅಂತೆಯೇ, ನಡೆದುಕೊಂಡಿದ್ದೇನೆ" ಎಂದರು.

ವರುಣ ಕ್ಷೇತ್ರದಲ್ಲಿ ಮೂರು ಬಾರಿ ಗೆದ್ದು, ಎರಡು ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ನಾನು ಎರಡು ಬಾರಿ ಮುಖ್ಯಮಂತ್ರಿ ಹಾಗೂ ಎರಡು ಬಾರಿ ವಿರೋಧ ಪಕ್ಷದ ನಾಯಕನಾಗಲು ವರುಣ ಕ್ಷೇತ್ರದ ಜನರ ಆಶೀರ್ವಾದವೇ ಕಾರಣ ಎಂದು ಸಿದ್ದರಾಮಯ್ಯ ಹೇಳಿದರು.

ನನ್ನ ರಾಜಕೀಯ ಶ್ರೇಯಸ್ಸಿಗೆ ವರುಣದ ಮತದಾರರೇ ಕಾರಣ. ಶಾಸಕನಾಗಿರಲಿ, ಇಲ್ಲದಿರಲಿ ವರುಣ ಕ್ಷೇತ್ರದ ಸೇವೆಯನ್ನು ಮುಂದುವರಿಸುತ್ತೇನೆ. ವರುಣ ಕ್ಷೇತ್ರವನ್ನು ನಾನು ಯಾವತ್ತೂ ಮರೆಯುವುದಿಲ್ಲ. ಇನ್ನೂ ಒಂದೂವರೆ ವರ್ಷ ಶಾಸಕನಾಗಿ ಇರುತ್ತೇನೆ. ನನಗೆ ಆಶೀರ್ವಾದ ಮಾಡಿದಂತೆ ಯತೀಂದ್ರ ಅವರಿಗೂ ನೀವು ಆಶೀರ್ವಾದ ಮಾಡಬೇಕು" ಎಂದು ಕೇಳಿಕೊಂಡರು.

ಈ ಮಧ್ಯೆ, ನೀವು ಮತ್ತೆ 2028ರ ಚುನಾವಣೆಗೂ ನಿಲ್ಲಬೇಕು. ನಿಮ್ಮನ್ನು ನಾವು ಗೆಲ್ಲಿಸುತ್ತೀವಿ ಎಂದು ವರುಣ ಕ್ಷೇತ್ರದ ಜನರು ಹೇಳಿದ್ದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದೆ ಸಿದ್ದರಾಮಯ್ಯ ಅವರು ಭಾಷಣ ಮುಗಿಸಿದ್ದು, ಮಾಜಿ ಸಿಎಂ ಅಭಿಮಾನಿಗಳಲ್ಲಿ ತೀವ್ರ ಬೇಸರ ಮೂಡಿಸಿತು.



ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

# ಸರಣಿ ಅಪಘಾತ, ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ 3 ಗಂಟೆ ರಸ್ತೆ ಬಂದ್

## ಹಂಪ್ಸ್ ರೆಡಿಯಂ, ಬಣ್ಣ, ಸೂಚನಾ ಫಲಕ ಅಳವಡಿಸದಿರುವುದೇ ಅಪಘಾತಕ್ಕೆ ಕಾರಣ: ಸಾರ್ವಜನಿಕರ ಆಕ್ರೋಶ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ಪಟ್ಟಣದ ಛತ್ರ ಕ್ರಾಸ್ ಬಳಿ ಸರಣಿ ಅಪಘಾತಗಳು ಸಂಭವಿಸುತ್ತಿದ್ದರೂ ಮುಂಜಾಗ್ರತಾ ಕ್ರಮ ಕೈಗೊಳ್ಳದ ಲೋಕೋಪಯೋಗಿ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳ ವಿರುದ್ಧ ಆಕ್ರೋಶಗೊಂಡ ಸಾರ್ವಜನಿಕರು ಭಾನುವಾರ ರಾತ್ರಿ ಏಕಾಏಕಿ ಗಜೇಂದ್ರಗಡ ಸೊರಬ ರಾಜ್ಯ ಹೆದ್ದಾರಿ ಬಂದ್ ಮಾಡಿ ಮೂರು ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು.

ಭಾನುವಾರ ರಾತ್ರಿ ಛತ್ರ ಕ್ರಾಸ್ ಬಳಿ ಬೈಕ್ ಅಪಘಾತ ಸಂಭವಿಸಿ ಯುವಕನೋರ್ವ ಗಂಭೀರವಾಗಿ ಗಾಯಗೊಂಡ ಘಟನೆ ಪ್ರತಿಭಟನೆಗೆ ಕಾರಣವಾಯಿತು. ಕಳೆದ ಒಂದು ತಿಂಗಳ ಹಿಂದೆ ಅಪಘಾತ ನಿಯಂತ್ರಿಸುವ ಉದ್ದೇಶದಿಂದ ರಸ್ತೆಯಲ್ಲಿ ಹಂಪ್ಸ್ ಅಳವಡಿಸಲಾಗಿದ್ದರೂ, ಅವುಗಳಿಗೆ ಸೂಕ್ತ ಬಣ್ಣ, ರೆಡಿಯಂ ಹಾಗೂ ಮುನ್ನೆಚ್ಚರಿಕೆ ಸೂಚನಾ ಫಲಕಗಳನ್ನು ಅಳವಡಿಸಿರಲಿಲ್ಲ. ಪರಿಣಾಮ ಹಂಪ್ಸಗಳು ರಾತ್ರಿ ವೇಳೆ ವಾಹನ ಸವಾರರಿಗೆ ಸರಿಯಾಗಿ ಗೋಚರಿಸದೆ ಅಪಘಾತಕ್ಕೆ ಕಾರಣವಾಗುತ್ತಿವೆ ಎಂದು ಸಾರ್ವಜನಿಕರು ಆರೋಪಿಸಿದರು.

ಅಪಘಾತದಲ್ಲಿ ಗಾಯಗೊಂಡ ಯುವಕನನ್ನು ಸ್ಥಳೀಯ ಸಾರ್ವಜನಿಕರೇ ತಮ್ಮ ವಾಹನದಲ್ಲಿ ಆಸ್ಪತ್ರೆಗೆ ಸಾಗಿಸಿದರು. ಇದೇ ರಸ್ತೆಯಲ್ಲಿ ಪದೇಪದೆ ಅಪಘಾತಗಳು ಸಂಭವಿಸುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳದಿ ರುವುದನ್ನು ಖಂಡಿಸಿ ನೂರಾರು ಸಾರ್ವಜನಿಕರು ಏಕಾಏಕಿ ರಸ್ತೆ ಬಂದ್ ಮಾಡಿ ಪ್ರತಿಭಟನೆ ಆರಂಭಿಸಿದರು.

3 ತಿಂಗಳಲ್ಲಿ 9 ಅಪಘಾತ; 6 ಸಾವು: ಪ್ರತಿಭಟನೆಯಲ್ಲಿ ಮಾತನಾಡಿದ ನ್ಯಾಯವಾದಿ ಕಿರಣಕುಮಾರ ಎಂ.ಎಲ್. ಕಳೆದ ಕೆಲ ತಿಂಗ ಳಲ್ಲಿ ಇದೇ ರಸ್ತೆಯಲ್ಲಿ ಸುಮಾರು 9 ಅಪಘಾತಗಳು ಸಂಭವಿಸಿದ್ದು, 6 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. "ಸಾರ್ವಜನಿಕರ ಪ್ರಾಣ ರಕ್ಷಣೆಗಾಗಿ ಹಂಪ್ಸ್ ಅಳವಡಿಸಲಾಗಿದೆ. ಆದರೆ ಅವುಗಳಿಗೆ ಸೂಕ್ತ ಬಣ್ಣ, ರೆಡಿಯಂ ಹಾಗೂ ಸೂಚನಾ ಫಲಕ ಅಳವಡಿಸದಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಹಂಪ್ಸಗಳು ರಾತ್ರಿ ವೇಳೆ ವಾಹನ ಸವಾರರಿಗೆ ಕಾಣಿಸದ ಕಾರಣ ಅಪಘಾತಗಳು ಸಂಭವಿಸುತ್ತಿವೆ. ಸಾವು–ನೋವು ಮುಂದುವರಿದರೂ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಯಾವುದೇ ಸೂಕ್ತ ಕ್ರಮ ಕೈಗೊಂಡಿಲ್ಲ. ಮುಂದಿನ ಅನಾಹುತಗಳಿಗೆ ಅಧಿಕಾರಿಗಳೇ ಹೊಣೆ," ಎಂದು ಆಕ್ರೋಶ ವ್ಯಕ್ತಪಡಿಸಿದರು.




### ಜೆಸಿಬಿ ಮೂಲಕ ಹಂಪ್ಸ್ ತೆರವು

ಪ್ರತಿಭಟನೆ ಸಂದರ್ಭದಲ್ಲಿ ಅಪಘಾತಕ್ಕೆ ಕಾರಣವಾಗುತ್ತಿದ್ದ ಹಂಪ್ಸ್‌ಗಳನ್ನು ಡಿವೈಎಸ್‌ಪಿ ಗಿರಿಮಲ್ಲಪ್ಪ ತಳಕಟ್ಟಿ ಅವರು ಸ್ಥಳದಲ್ಲೇ ನಿಂತು ಜೆಸಿಬಿ ಮೂಲಕ ತೆರವುಗೊಳಿಸಿದರು. ಅಲ್ಲದೆ, ರಸ್ತೆಯಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಸೋಮವಾರ ಅಗತ್ಯವಿರುವ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು.

"ಪಟ್ಟಣದ ವ್ಯಾಪ್ತಿಯಲ್ಲಿ ವಾಹನಗಳ ವೇಗ ನಿಯಂತ್ರಿಸುವ ಉದ್ದೇಶದಿಂದ ಹಂಪ್ಸಗಳನ್ನು ಅಳವಡಿಸಲಾಗುತ್ತದೆ. ಇದರಿಂದ ಸಾರ್ವಜನಿಕರ ಪ್ರಾಣ ರಕ್ಷಿಸಲು ಸಾಧ್ಯವಾಗುತ್ತದೆ. ಆದರೆ ವಾಹನ ಸವಾರರೂ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಹೆಲ್ಮೆಟ್ ಧರಿಸುವಣ ಮೂಲಕವೂ ಹಲವು ಅಪಘಾತಗಳಲ್ಲಿ ಪ್ರಾಣಹಾನಿಯನ್ನು ತಪ್ಪಿಸಬಹುದು."

। ಗಿರಿಮಲ್ಲಪ್ಪ ತಳಕಟ್ಟಿ ಡಿವೈಎಸ್‌ಪಿ, ಹಾವೇರಿ

ಸಿಪಿಐ, ಪಿಎಸ್‌ಐ ಭೇಟಿ; ಪ್ರತಿಭಟನೆ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಸಿಪಿಐ ಎಂ.ಬಿ. ಚಿಕ್ಕಣ್ಣನವರ ಹಾಗೂ ಪಿಎಸ್‌ಐ ಭಾರತಿ ಕುರಿ ಭೇಟಿ ನೀಡಿ ಪ್ರತಿಭಟನೆ ಕೈಬಿಟ್ಟು ರಸ್ತೆ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಮನವಿ ಮಾಡಿದರು. ಆದರೆ ಪ್ರತಿಭಟ ನಕಾರರು ಇದಕ್ಕೆ ಒಪ್ಪದೆ, ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವವರೆಗೆ ಪ್ರತಿಭಟನೆ ಮುಂದುವರಿಸುವುದಾಗಿ ಪಟ್ಟು ಹಿಡಿದರು. ಕೆಲವರು ರಸ್ತೆಯ ಮೇಲೆಯೇ ಮಲಗಿ ಪ್ರತಿಭಟನೆ ನಡೆಸಿ, ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಮಿಸಬೇಕೆಂದು ಒತ್ತಾಯಿಸಿದರು.

### ಪ್ರಯಾಣಿಕರ ಪರದಾಟ

ಏಕಾಏಕಿ ನಡೆದ ರಸ್ತೆ ಬಂದ್‌ನಿಂದ ಗಜೇಂದ್ರಗಡ–ಸೊರಬ ರಾಜ್ಯ ಹೆದ್ದಾರಿಯ ಎರಡೂ ಬದಿಗಳಲ್ಲಿ ನೂರಾರು ವಾಹನಗಳು ಸಿಲುಕಿಕೊಂಡವು. ಸುಮಾರು 3 ಕಿ.ಮೀ.ವರೆಗೆ ವಾಹನಗಳ ಸಾಲು ನಿರ್ಮಾಣವಾಗಿದ್ದು, ಪ್ರಯಾಣಿಕರು ಹಾಗೂ ಸಾರ್ವಜನಿಕರು ಗಂಟೆಗಟ್ಟಲೆ ಪರದಾಡುವಂತಾಯಿತು.

ಸ್ಥಳಕ್ಕೆ ಮಾಜಿ ಶಾಸಕ:ವಿಷಯ ತಿಳಿದು ಸ್ಥಳಕ್ಕೆ ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ವಿರುಪಾಕ್ಷಪ್ಪ ಬಳ್ಳಾರಿ,ಣ ತಾಲೂಕು ಬಿಜೆಪಿ ಅಧ್ಯಕ್ಷನಿಂಗಪ್ಪ ಬಟ್ಟಲಕಟ್ಟಿ ಭೇಟಿ ನೀಡಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಆಕ್ರೋಶ ವ್ಯಕ್ತಪಡಿಸಿದರು. ಪಕ್ಷಭೇದ ಮರೆತು ರವಿ ಪೂಜಾರ, ವೀರೇಶ ಮತ್ತಿಹಳ್ಳಿ,ಣ ಶಶಿಧರ ಸೊರಟೂರ, ಗಿರೀಶ ಶಿಂಧೆ, ಬಸವರಾಜ ಹಾವನೂರ, ನಾರಾ ಯಣ ಪೂಜಾರ, ಸುಧೀರ ಹವಳದ, ಪೀರಾಂಬಿ ವರದಿ, ಲಿಂಗರಾಜ ಛತ್ರದ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು, ಸಾರ್ವಜನಿಕರು ಹಾಗೂ ರಸ್ತೆ ಬದಿಯ ನಿವಾಸಿಗಳು ಪ್ರತಿಭಟನೆಗೆ ಬೆಂಬಲ ನೀಡಿದರು.

ಡಿವೈಎಸ್‌ಪಿ ಭೇಟಿ: ಬಳಿಕ ಪ್ರತಿಭಟನೆ ವಾಪಸ್:ರಸ್ತೆ ಬಂದ್ ವಿಚಾರ ತಿಳಿದು ಸ್ಥಳಕ್ಕೆ ಹಾವೇರಿ ಡಿವೈಎಸ್‌ಪಿ ಗಿರಿಮಲ್ಲಪ್ಪ ತಳಕಟ್ಟಿ ಭೇಟಿ ನೀಡಿ ಪ್ರತಿಭಟನಕಾರರೊಂದಿಗೆ ಮಾತುಕತೆ ನಡೆಸಿದರು. ಆದರೆ ರಸ್ತೆ ಸುರಕ್ಷತೆ ಕುರಿತು ನಿರ್ಲಕ್ಷ್ಯ ವಹಿಸುತ್ತಿರುವ ಲೋಕೋಪಯೋಗಿ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಬೇಕೆಂದು ಪ್ರತಿಭಟನಕಾರರು ಪಟ್ಟು ಹಿಡಿದರು. ನಂತರ ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು, ವೈಜ್ಞಾನಿಕ ಹಂಪ್ಸ್ ಅಳವಡಿಸುವುದು ಹಾಗೂ ಅಗತ್ಯವಿರುವ ಕಡೆ ಲೈಟ್ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಉಂಟಾಗಿರುವ ಸಮಸ್ಯೆಗಳನ್ನು ಸೋಮವಾರ ಸಂಜೆಯೊಳಗೆ ಸರಿಪಡಿಸುವ ಭರವಸೆ ನೀಡಿದರು. ಬಳಿಕ ಪ್ರತಿಭಟನಕಾರರು ರಸ್ತೆ ಸಂಚಾರಕ್ಕೆ ಅವಕಾಶ ನೀಡಿ ಪ್ರತಿಭಟನೆ ಕೈಬಿಟ್ಟರು.

# ದೇವಾಂಗ ಸಂಘದ ರಾಜ್ಯ ಸಮಿತಿಗೆ ಶರದ್, ಲಕ್ಷ್ಮಿಕಾಂತ ಆಯ್ಕೆ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ನಗರದ ದೊಡ್ಡಪೇಟೆಯ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಡೆದ ರ ರಾಜ್ಯ ದೇವಾಂಗ ಸಂಘದ 31 ನೇ ಅವಧಿಗೆ ಕಾರ್ಯಕಾರಿ ಸಮಿತಿಯ ಎರಡು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಹಾವೇರಿಯ ಶರದ್ ಕುದರಿ 159 ಮತಗಳು ಹಾಗೂ ರಾಣೇಬೆನ್ನೂರಿನ ಲಕ್ಷ್ಮಿಕಾಂತ ಹುಲಗೂರ ಅವರು 142 ಮತಗಳನ್ನು ಪಡೆದು ರಾಜ್ಯ ಸಮಿತಿಗೆ ಆಯ್ಕೆಯಾದರು. ಬಸವರಾಜ ಲಕ್ಕೇಶ್ವರ, ಲಕ್ಷ್ಮಿಕಾಂತ ಹುಲಗೂರ, ಶರದ್ ಎಸ್ ಕುದುರಿ ಚುನಾವಣೆಗೆ ಉಮೇದುವಾರಿಕೆ ಸಲ್ಲಿಸಿದ್ದರು. ಅದರಲ್ಲಿ ಬಸವರಾಜ ಲಕ್ಕೇಶ್ವರ 91 ಮತಗಳನ್ನು ಪಡೆದು ಪರಾಭವಗೊಂಡರು.

ಬೆಳಗ್ಗೆಯಿಂದಲೇ ನಡೆದ ತುರುಸಿನ ಮತದಾನ ಪ್ರಕ್ರಿಯೆಯಲ್ಲಿ 238 ಮತದಾರರಲ್ಲಿ 208 ಮತಗಳು ಚಲಾವಣೆಗೊಂಡವು.

ದೇವಾಂಗ ಸಮಾಜದ ಜಿಲ್ಲಾ ಗೌರವಾಧ್ಯಕ್ಷ ಸಂಕಪ್ಪ ಮಾರನಾಳ, ಜಿಲ್ಲಾ ಪ್ರಧಾನ ಕರ್ಯರ್ತಿ ಗಣೇಶ ಸಾಲಗೇರಿ, ಚಿದಂಬರಪ್ಪ ಕುದರಿ, ಮಂಜುನಾಥ ಕೆರೂಡಿ, ನಾರಾಯಣಪ್ಪ ಮಂಡಕ್ಕಿ, ನಾಗರಾಜ ಮತ್ತೂರು, ಗಣೇಶ ಶಿರಗೂರ, ಮಂಜುನಾಥ ಬೆಟಗೇರಿ, ಚಂದ್ರಪ್ಪ ರಿತ್ತಿ, ಗಣೇಶ ಹಾವನೂರ, ಚಂದ್ರಪ್ಪ ಊದಗಟ್ಟಿ, ಗಿರೀಶ್ ಗುಳೇದಗುಡ್ಡ ಸೇರಿದಂತೆ ದೇವಾಂಗ ಸಮಾಜ ಬಾಂಧವರು ಇದ್ದರು.

ಚುನಾವಣಾಧಿಕಾರಿಯಾಗಿ ಬಸವರಾಜ ಮೈಲಾರ, ಸುರೇಶ್ ಮಾರನಾಳ, ಮನೋಹರ ಢವಳಗಿ, ಅಶೋಕ್ ದುರ್ಗದಸೀಮಿ ಕಾರ್ಯ ನಿರ್ವಹಿಸಿದರು.





ಹಾವೇರಿ : ಇಲ್ಲಿನ ಅಶ್ವಿನಿ ನಗರದ 3 ನೇ ಕ್ರಾಸಿನ ಶ್ರೀಯುತ ವನಮಾಲಾ ಜೈನ್ ಅವರ ಮನೆಯಲ್ಲಿ ಕಾಣಿಸಿಕೊಂಡಿದ್ದ ನಾಗರ ಹಾವನ್ನು ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸ್ನೇಕ್ ರಮೇಶ ಅವರು ಸುರಕ್ಷಿತವಾಗಿ ಹಿಡಿದು ಕಾಡಿಗೆ ಬಿಡುವ ಕೆಲಸ ಮಾಡಿದರು.ಮನೆ ಆವರಣದಲ್ಲಿ ಎರಡು ದಿನಗಳಿಂದಲೂ ಹಾವು ಕಾಣಿಸಿಕೊಂಡಿದ್ದು, ಮನೆಯವರು ಆತಂಕಗೊಂಡಿದ್ದರು. ಸ್ನೇಕ್ ರಮೇಶ ಅವರು ಹಾವು ಹಿಡಿದು ಕಾಡಿಗೆ ಬಿಡುವ ಕೆಲಸ ಮಾಡಿರುವುದರಿಂದ ನಿಟ್ಟುಸಿರು ಬಿಡುವಂತಾಗಿದೆ. ಹಾವೇರಿ ಜಿಲ್ಲೆಯ ಯಾವುದೇ ಊರಿನಲ್ಲಿ ಆಗಲಿ ಹಾವು ಕಂಡರೆ ಸ್ನೇಕ್ ರಮೇಶ ಅವರು ನೆನಪು ಆಗುತ್ತಾರೆ. ಸ್ನೇಕ್ ರಮೇಶ ಅವರನ್ನು ಶ್ರೀಯುತ ವನಮಾಲಾ ಜೈನ್ ಅವರ ಕುಟುಂಬ ವರ್ಗದವರು ಶ್ಲಾಘಿಸಿದರು.

# ಗಾಂಜಾ ಮಾರಾಟ ಮಾಡುತ್ತಿದ್ದ 5 ಜನರ ಬಂಧನ

**ಸಮಾಲೋಚನೆ ಸುದ್ದಿ ಹಾವೇರಿ**

ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿತರನ್ನು ಶಹರ ಪೊಲೀಸ್ ಠಾಣೆಯ ಪೋಲಿಸರು ಬಂಧಿಸಿದ ಘಟನೆ ಜರುಗಿದೆ.ಶಹರದ ತರಳಬಾಳು ನಗರದ ಹತ್ತಿರ ಡಿ.ಸಿ ಆಫೀಸ್ ಹೋಗುವ ಸಾರ್ವಜನಿಕ ರಸ್ತೆಯ ಬದಿಯಲ್ಲಿ ತಮ್ಮ ಸ್ವಂತ ಲಾಭಕ್ಕಾಗಿ ಗಾಂಜಾ ಮಾರಾಟ ಮಾಡುತ್ತಿದ್ದ 05 ಜನ ಆರೋಪಿತರಾದ ಸಾಹೀಲ ಅಹ್ಮದ ತಂದೆ ಸಲೀಂಅಹ್ಮದ ಕರ್ಜಗಿ,ಸೋಹೆಲ್ ತಂದೆ ನೂರಅಹ್ಮದ ಕುಡಚಿ,ಅಬ್ದುಲ್ ತಂದೆ ಅಕ್ಬರಸಾಬ ಹಾದಿಮನಿ,ಮಂಜುನಾಥ ತಂದೆ ಶಿವಬಸಪ್ಪ ಕಲಕೋಟಿ,ಸುದೀಪ ಕನಕಪ್ಪ ಹಾವೇರಿ(ಒಬ್ಬ ಕಾನೂನು ಸಂಘರ್ಷಕ್ಕೊಳಗಾದ ಬಾಲಕ) ಅವರನ್ನು ವಶಕ್ಕೆ ಪಡೆದುಕೊಂಡು ಅವರಿಂದ ಸ್ವಿಫ್ಟ್ ಡಿಸೈರ್ ಸುಮಾರು 5,38,250/–ರೂ ಕಿಮ್ಮತ್ತಿನ 10 ಕೆಜಿ 765 ಗ್ರಾಂ ಮೊಗ್ಗು ಬೀಜ ಮಿಶ್ರಿತ ಗಂಟು ಗಂಟಾದ ಒಣಗಿದ ಘಾಟು ವಾಸನೆಯುಳ್ಳ ನಿಷೇಧಿತ ಗಾಂಜಾವನ್ನು ಜಪ್ತಿ ಮಾಡಿದ್ದು,1985 ನೇದ್ದರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿರುತ್ತದೆ.ಪ್ರಕರಣದಲ್ಲಿ ತನಿಖೆ ಮುಂದುವರೆದಿರುತ್ತದೆ ಎಂದು ತಿಳಿದ್ದಾರೆ.

ಈ ಕಾರ್ಯಾಚರಣೆಯನ್ನು ಪೊಲೀಸ್ ಅಧೀಕ್ಷಕರಾದ ಯಶೋಧಾ ವಂಟಗೋಡಿ, ಐಪಿಎಸ್ ಮಾರ್ಗದರ್ಶನದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಎಲ್.ವೈ.ಶಿರಕೋಳ ಮತ್ತು ಹಾವೇರಿ ಉಪ–ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಗಿರಿಮಲ್ಲ



ತಳಕಟ್ಟಿ ರವರ ನೇತೃತ್ವದಲ್ಲಿ ಹಾವೇರಿ ಶಹರ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಮೋತಿಲಾಲ್ ಆರ್ ಪವಾರ ರವರ ಮುಂದಾಳತ್ವದಲ್ಲಿ ಶಹರ ಪೊಲೀಸ್ ಠಾಣೆಯ ಪಿಎಸ್ಐ ರವರಾದ ಬಿ.ಜಿ.ದೊಡ್ಡಮನಿ,ಎನ್ ಎನ್ ಶಿಶುವಿನಹಾಳ ಮತ್ತು ಸಿಬ್ಬಂದಿ ಜನರಾದ ಯಲ್ಲಪ್ಪ ತಹಶೀಲ್ದಾರ ಕುಬೇರಪ್ಪ,ಮುತ್ತಪ್ಪ ಲಮಾಣಿ,ಮುತ್ತು ಚಿಂದಿ,ಚನ್ನಬಸಪ್ಪ ಆರ್.ಬಿ, ಎನ್‌ಲಿಂಗರಾಜ,ಚಂದ್ರಕಾಂತ.ಎಲ್.ಆರ್,ಶಂಕರ,ಮೆಹಬೂಬಅಲಿ, ಮಲ್ಲೇಶ, ಮಾಲತೇಶ ಕಬ್ಬೂರ ಹಾಗೂ ತಾಂತ್ರಿಕ ಸಿಬ್ಬಂದಿ ಜನರಾದ ಮಾರುತಿ ಹಾಲಭಾವಿ,ಸತೀಶ ಮಾರುಕಟ್ಟೆ,ಶಶಿಕುಮಾರ ಕಾಕೋಳ,ಸೂರಜ್,ಸಿದ್ದರಾಮೇಶ, ದಯಾನಂದ ಅವರು ಪತ್ತೆ ಕುರಿತು ಶ್ರಮಿಸಿರುತ್ತಾರೆ.ಈ ಪತ್ತೆ ಕಾರ್ಯದ ಬಗ್ಗೆ ಮೇಲಾಧಿಕಾರಿಗಳು ಶ್ಲಾಘಿಸಿದ್ದಾರೆ.

# ಕಾಗಿನೆಲೆಯಲ್ಲಿ ನ.17ರಂದು ಶ್ರೀ ಕನಕದಾಸರ ಜಯಂತೋತ್ಸವ

## ಸಂಸ್ಕೃತಿ, ಸಾಹಿತ್ಯ ಹಾಗೂ ಧಾರ್ಮಿಕ ಜಾಗೃತಿಯೊಂದಿಗೆ ಆಚರಣೆಗೆ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಕರೆ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ಕಾಗಿನೆಲೆಯ ಶ್ರೀ ಕನಕ ಗುರುಪೀಠದಲ್ಲಿ ನವೆಂಬರ್ 17 ರಂದು ಶ್ರೀ ಕನಕದಾಸರ ಜಯಂತೋತ್ಸವವನ್ನು ಸಂಸ್ಕೃತಿ, ಸಾಹಿತ್ಯ ಹಾಗೂ ಧಾರ್ಮಿಕ ಜಾಗೃತಿಯೊಂದಿಗೆ ಅರ್ಥಪೂರ್ಣವಾಗಿ ಆಚರಿಸುವಂತೆ ಶ್ರೀ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾ ನಂದಪುರಿ ಮಹಾಸ್ವಾಮೀಜಿ ಭಕ್ತ ಸಮೂಹಕ್ಕೆ ಕರೆ ನೀಡಿದರು.

ಕಾಗಿನೆಲೆಯ ಶ್ರೀ ಕನಕ ಗುರುಪೀಠದಲ್ಲಿ ಭಾನುವಾರ ನಡೆದ 2026ನೇ ಸಾಲಿನ ಶ್ರೀ ಕನಕ ಜಯಂತೋತ್ಸವದ ಪೂರ್ವಭಾವಿ ಸಮಾಲೋಚನಾ ಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಈ ಬಾರಿಯ ಶ್ರೀ ಕನಕ ಜಯಂ ತೋತ್ಸವವನ್ನು ಹಾವೇರಿ ತಾಲೂಕು ಕುರುಬರ ಸಂಘ, ತಾಲೂಕು ಶ್ರೀ ಕನಕ ನೌಕರರ ಸಂಘ ಹಾಗೂ ಕಾಗಿನೇಲೆಯ ಶ್ರೀ ಕನಕ ಗುರುಪೀಠದ ಸಂಯುಕ್ತ ಆಶ್ರಯದಲ್ಲಿ ಆಚರಿಸಲಾಗುವುದು.ಜಯಂತೋತ್ಸವದ ಯಶಸ್ಸಿಗೆ ಅಗತ್ಯವಾದ ಸಿದ್ಧತೆಗಳನ್ನು ಪೂರ್ವಭಾವಿಯಾಗಿ ಕೈಗೊಳ್ಳಬೇಕು ಎಂದು ತಿಳಿಸಿದರು.

ಜನಜಾಗೃತಿ ಮೂಡಿಸುವ ಕಾರ್ಯಕ್ರಮ:ಕನಕ ಜಯಂತೋತ್ಸವದ ಅಂಗವಾಗಿ ಹಾವೇರಿ ತಾಲೂಕಿನ ಆಯ್ದ ಗ್ರಾಮಗಳಲ್ಲಿ ದುಶ್ಚಟ ಗಳ ವಿರುದ್ಧ ಜನಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಶ್ರೀ ರೇವಣಸಿದ್ದೇಶ್ವರರ ಜೋಳಿಗೆ ಹಿಡಿದು ಭಿಕ್ಷಾಟನೆ ನಡೆಸುವ ಮೂಲಕ ಗ್ರಾಮೀಣ ಜನರಲ್ಲಿ ದುಶ್ಚಟಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಗುವುದು ಎಂದರು.

ಸಾಂಸ್ಕೃತಿಕ ಕರ್ಯಕ್ರಗಳು:ಶ್ರೀ ಮಠದಲ್ಲಿ ಶ್ರೀ ದಾನಮ್ಮ ದೇವಿಯ ಪುರಾಣ, ಪ್ರವಚನ ಸೇರಿದಂತೆ ವಿವಿಧ ಧಾರ್ಮಿಕಹಾಗೂಸಾಂಸ್ಕೃತಿಕಕಾರ್ಯಕ್ರಮಗಳನ್ನು ಆಯೋಜಿಸಿ ಭಕ್ತಿ, ಧರ್ಮ ಹಾಗೂ ಸಾಮಾಜಿಕ ಜಾಗೃತಿಯನ್ನು ಮೂಡಿಸುವಿದರ ಜೊತೆಯಲ್ಲಿ ಕನಕದಾಸರ ತತ್ವಾದರ್ಶಗಳು, ಸಮಾನತೆ, ಮಾನವೀಯತೆ ಹಾಗೂ ಸಾಮಾಜಿಕ ಸಾಮರಸ್ಯದ ಸಂದೇಶವನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಜಯಂತೋತ್ಸವವನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ ಜನಜಾಗೃತಿಯ ಕಾರ್ಯಕ್ರಮವನ್ನಾಗಿ ರೂಪಿಸ ಬೇಕು ಎಂದು ಕರೆ ನೀಡಿದರು. ಸಮಾಲೋಚನಾ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಾಗರಾಜ ಆನ್ವೇರಿ ವಹಿಸಿದ್ದರು. ಶ್ರೀಮಠದ ಆಡಳಿತಾಧಿಕಾರಿ ಎಸ್.ಎಫ್.ಎನ್. ಗಾಜಿಗೌಡರ, ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಮಲ್ಲೇಶಪ್ಪ ಕರಿಗಾರ, ತಾಲೂಕು ಕುರುಬರ ಸಂಘದ ಅಧ್ಯಕ್ಷ ವೀರಪಾಕ್ಷ ಹುಲ್ಲೂರ, ತಾಲೂಕು ಕನಕ ನೌಕರರ ಸಂಘದ ಅಧ್ಯಕ್ಷ ಎಸ್.ಎನ್. ಕಂಬಳಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು. ಜಿಲ್ಲಾ ಕುರುಬರ ಸಂಘದ ಪದಾಧಿಕಾರಿಗಳಾದ ಅಶೋಕ ಬಣಕಾರ, ರಾಜೇಂದ್ರ ಹಾವೇರಣ್ಣನವರ, ಸಿದ್ದಣ್ಣ ಲಿಂಗಮ್ಮನವರ, ಹನಮಂತಗೌಡ ಗಾಜಿಗೌಡರ, ಶಂಕ್ರಣ್ಣಮಾತಿನವರ, ನಿಂಗಪ್ಪತುಕ್ಕಣ್ಣನವರ, ರಾಜು ಶಿವಣ್ಣನವರ, ಶಿವರಾಜ ಅಮರಾಪೂರ, ಚಿಕ್ಕಣ್ಣ ಹಾದಿಮನಿ, ಮಹೇಶ ಪವಾಡ, ಮೃತ್ಯುಂಜಯ್ಯ ಗುದಗೇರ, ಶಿವಪುತ್ರಪ್ಪ ಅಗಡಿ, ಬಸವರಾಜ ಕಂಬಳಿ, ಪರಶುರಾಮ ಬಗಾಡೆ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.



# ಅಣ್ಣಪ್ಪ ಅಜ್ಜೇರಗೆ ಡಾ. ಎಸ್.ಪಿ. ಬಾಲಸುಬ್ರಮಣ್ಯಂ ರಾಷ್ಟ್ರ ಪ್ರಶಸ್ತಿ

**ಹರಿಹರ :** ಸಂಗೀತ ಕ್ಷೇತ್ರ ಹಾಗೂ ಸಮಾಜ ಸೇವೆಯಲ್ಲಿ ಸಲ್ಲಿಸಿದ ಅವಿಸ್ಮರಣೀಯ ಸೇವೆಯನ್ನು ಪರಿಗಣಿಸಿ ಹರಿಹರದ ಗಾಯಕ, ಕಲಾವಿದ ಅಣ್ಣಪ್ಪ ಅಜ್ಜೇರ ಅವರಿಗೆ ಡಾ. ಎಸ್.ಪಿ. ಬಾಲಸುಬ್ರಮಣ್ಯಂ ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಸುವರ್ಣ ಕರ್ನಾಟಕ ಪ್ರೆಸ್ ಅಸೋಸಿಯೇಷನ್ ಹಾಗೂ ಕರ್ನಾಟಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಮಹಾತ್ಮ ಗಾಂಧಿ ಜಯಂತಿ ಹಾಗೂ ಎಸ್. ಜಾನಕಿ ನುಡಿನಮನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜನನಿ ಜನ್ಮದಾತ ಸಾಂಸ್ಕೃತಿಕಕಲಾಟ್ರಸ್ಟ್‌ನಸಂಸ್ಥಾಪಕಅಧ್ಯಕ್ಷರಾಗಿರುವ ಅಣ್ಣಪ್ಪ ಅಜ್ಜೇರ ಅವರು ಕಳೆದ 22 ವರ್ಷಗಳಿಂದ ಜನಪದ ಗೀತೆ, ಭಜನೆ, ಸುಗಮ ಸಂಗೀತ ಹಾಗೂ ಜನಜಾಗೃತಿ ಬೀದಿ ನಾಟಕಗಳ ಮೂಲಕ ಕನ್ನಡ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಉಳಿವಿಗೆ ಶ್ರಮಿಸಿದ್ದಾರೆ. ಟ್ರಸ್ಟ್‌ನ ರಾಜ್ಯಾಧ್ಯಕ್ಷೆ ಡಾ. ಮಂಜುಳಾ ಪಾವಗಡ ಮಾತನಾಡಿ, ಕಲೆಯನ್ನು ಉಳಿಸಿ ಬೆಳೆಸುತ್ತಿರುವ ಕಲಾವಿದರನ್ನು ಗೌರವಿಸುವುದು ಸಂತಸದ ವಿಚಾರ ಎಂದರು. ರಕ್ತದಾನಿ ತ್ಯಾಗರಾಜು, ಗಾಯಕ ವೇಣು ಮಾಧವ್, ರಾಜೇಗೌಡ ಕೆ.ಎಸ್., ಸುನಿಲ್ ಪವಾರ್




ಸೇರಿದಂತೆ ಹಲವರು ಅಣ್ಣಪ್ಪ ಅಜ್ಜೇರ ಅವರನ್ನು ಅಭಿನಂದಿಸಿದರು.

SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ



# ಕುಮದ್ವತಿಗೆ ನೀರು ಹರಿಸದಿದ್ದರೆ ರಕ್ತ ಹರಿಸಬೇಕಾದೀತು!

## ಬರದಿಂದ ಬತ್ತಿದ ನದಿ; ಯುಟಿಪಿ ಎಸ್ಕೇಪ್‌ನಿಂದ ನೀರು ಹರಿಸಲು ರೈತರ ಆಗ್ರಹ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ಜಿಲ್ಲೆಯಲ್ಲಿ ತೀವ್ರ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ಕುಮದ್ವತಿ ನದಿ ಸೇರಿದಂತೆ ಜಿಲ್ಲೆಯ ಸಣ್ಣ–ಪುಟ್ಟ ನದಿಗಳು, ಹಳ್ಳ–ಕೊಳ್ಳಗಳು ಬತ್ತಿಹೋಗಿವೆ. ಮಳೆ ಕೊರತೆಯಿಂದ ಕೆರೆಗಳು ಭರ್ತಿಯಾಗದ ಪರಿಣಾಮ ಕುಮದ್ವತಿ ನದಿ ಪಾತ್ರದ ರೈತರು ಹಾಗೂ ಜನರು ತೀವ್ರ ಜಲ ಸಂಕಷ್ಟ ಎದುರಿಸುವಂತಾಗಿದೆ. ಅಂತರ್ಜಲ ಮಟ್ಟವೂ ಗಣನೀಯವಾಗಿ ಕುಸಿದಿದ್ದು, ರೈತರು 800ರಿಂದ 1000 ಅಡಿ ಆಳದವರೆಗೆ ಕೊಳವೆಬಾವಿ ಕೊರೆದರೂ ನೀರು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಮುಂದಿನ ದಿನಗಳಲ್ಲಿ ಜನರಿಗೆ ಕುಡಿಯುವ ನೀರಿಗೂ ಪರದಾಡುವ ಸ್ಥಿತಿ ಬರಬಹುದು ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ರೈತ ಮುಖಂಡ ಹಾಗೂ ಪ್ರಗತಿಪರ ಚಿಂತಕ ರವೀಂದ್ರಗೌಡ ಎಫ್. ಪಾಟೀಲ ನೇತೃತ್ವದಲ್ಲಿ ನೂರಾರು ರೈತರು ತಾಲೂಕಿನ ಮಾಕನೂರು ರಸ್ತೆಯಲ್ಲಿರುವ ಕರ್ನಾಟಕ ನೀರಾವರಿ ಇಲಾಖೆಯ ಯುಟಿಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಯುಟಿಪಿ ಮುಖ್ಯ ಕಾಲುವೆಯ ಹಾರೋಗೊಪ್ಪದ ಸಮೀಪದ ಎಸ್ಕೇಪ್‌ನಿಂದ ಕುಮದ್ವತಿ ನದಿಗೆ ಕಾನೂನುಬದ್ಧವಾಗಿ ನೀರು ಹರಿಸುವ ಯೋಜನೆಯನ್ನು ತಕ್ಷಣ ಜಾರಿಗೆ ತರಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿವರ್ಷ ಇದೇ ಅವಧಿಯಲ್ಲಿ ಯುಟಿಪಿ ಕಾಲುವೆಯಿಂದ ಕುಮದ್ವತಿಗೆ ನೀರು ಹರಿಸುವ ಶಾಶ್ವತ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಅಪರತುಂಗಾ ಯೋಜನೆಯ ಮುಖ್ಯ ಕಾಲುವೆಯ ನೀರು ಎಸ್ಕೇಪ್ ಮೂಲಕ



ಕುಮದ್ವತಿ ನದಿಗೆ ಹರಿಸಿದರೆ ಸುಮಾರು ಎರಡು ತಿಂಗಳ ಕಾಲ ನೀರನ್ನು ಸಂಗ್ರಹಿಸಿಕೊಳ್ಳಲು ಸಾಧ್ಯವಾಗಲಿದೆ. ಇದರಿಂದ ರೈತರಿಗೆ ಮಾತ್ರವಲ್ಲದೆ, ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಕಡಿಮೆಯಾಗಲಿದೆ ಎಂದು ಪಾಟೀಲ ತಿಳಿಸಿದರು.

ಕುಮದ್ವತಿ ನದಿಗೆ ನೀರು ಹರಿಸುವುದರ ಜೊತೆಗೆ ಮಲಕನಹಳ್ಳಿ, ಹೊಳೆಆನ್ವೇರಿ, ಮುಷ್ಟೂರು, ಮಣಕೂರು, ಲಿಂಗದಹಳ್ಳಿ, ನಂದಿಹಳ್ಳಿ, ಕುಪ್ಪೇಲೂರು ಹಾಗೂ ಗೋಡಿಹಾಳ ಭಾಗಗಳಲ್ಲಿ ನಿರ್ಮಿಸಿರುವ ಬ್ರಿಡ್ಜ್ ಕಂ ಬ್ಯಾರೇಜ್‌ಗಳನ್ನು ಸಮರ್ಪಕವಾಗಿ ನಿರ್ವಹಿಸಿ ನೀರು ಸಂಗ್ರಹಿಸಬೇಕು ಎಂದು ರೈತರು ಒತ್ತಾಯಿಸಿದರು.

ಪ್ರತಿ ವರ್ಷ ನಿರ್ವಹಣೆಗೆ ಅನುದಾನ ಬಿಡುಗಡೆಯಾಗುತ್ತಿದ್ದರೂ ಬ್ಯಾರೇಜ್‌ಗಳ ಗೇಟ್‌ಗಳ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬ ಆರೋಪವೂ ಕೇಳಿಬಂದಿತು. ಬರ ಪರಿಸ್ಥಿತಿಯ ಗಂಭೀರತೆ ಅರಿತು ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಬೇಕು. ಇಲ್ಲವಾದರೆ ಪ್ರತಿಭಟನೆ ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ರೈತರು ಎಚ್ಚರಿಸಿದರು.

ಈ ಕುರಿತು ನೀರಾವರಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ತುರ್ತು ಸಂದೇಶ ಕಳುಹಿಸಿ, ಕುಮದ್ವತಿ ನದಿಗೆ ನೀರು ಹರಿಸುವ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ. ಪ್ರತಿಭಟನೆಯಲ್ಲಿ ಕುಮದ್ವತಿ ನದಿ ಪಾತ್ರದ ವಿವಿಧ ಗ್ರಾಮಗಳ ನೂರಾರು ರೈತರು ಭಾಗವಹಿಸಿದ್ದರು. ಹಲಗೇರಿ ಪಿಎಸ್‌ಐ ಕೃಷ್ಣಾ ಮಾನೆ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

## ಭೂಮಿಯ ಆರೋಗ್ಯ ಸುಧಾರಣೆಯೇ ನೈಸರ್ಗಿಕ ಕೃಷಿಯ ಮೊದಲ ಹೆಜ್ಜೆ: ಜಯಚಂದ್ರ ಶರ್ಮಾ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ನೈಸರ್ಗಿಕ ಹಾಗೂ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವ ರೈತರು ಮೊದಲು ಬೆಳೆಗಳ ಬೆಳವಣಿಗೆ, ಇಳುವರಿ ಹಾಗೂ ಲಾಭದ ಬಗ್ಗೆ ಚಿಂತಿಸುವ ಬದಲು ತಮ್ಮ ಭೂಮಿಯ ಆರೋಗ್ಯ ಸುಧಾರಣೆ ಮತ್ತು ಮಣ್ಣಿನ ಫಲವತ್ತತೆಯನ್ನು ಪುನಶ್ಚೇತನಗೊಳಿಸುವತ್ತ ಗಮನಹರಿಸಬೇಕು ಎಂದು ನೈಸರ್ಗಿಕ ಕೃಷಿ ಉಪನ್ಯಾಸಕ ಜಯಚಂದ್ರ ಶರ್ಮಾ ರೈತರಿಗೆ ಕಿವಿಮಾತು ಹೇಳಿದರು.

ಭಾನುವಾರ ಪಟ್ಟಣದ ಜಿಲ್ಲಾ ರೈತ ಸಂಘದ ಕಾರ್ಯಾಲಯದಲ್ಲಿ ಹಾವೇರಿ ಜಿಲ್ಲಾ ರೈತ ಸಂಘದ ವತಿಯಿಂದ ಆಯೋಜಿಸಲಾಗಿದ್ದ ನೈಸರ್ಗಿಕ ಹಾಗೂ ಸಾವಯವ ಕೃಷಿ ಕುರಿತ ವಿಶೇಷ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ರೈತರು ತಮ್ಮ ಜಮೀನಿನಲ್ಲಿರುವ ಕಳೆಗಳನ್ನು ನಾಶಪಡಿಸಲು ಹಾಗೂ ಕೀಟಗಳ ನಿಯಂತ್ರಣಕ್ಕೆ ದೊಡ್ಡ ದೊಡ್ಡ ಕಂಪನಿಗಳ ರಾಸಾಯನಿಕ ಔಷಧಿಗಳನ್ನು ನಿರಂತರವಾಗಿ ಸಿಂಪಡಿಸುವ ಮೂಲಕ ಮಣ್ಣಿನ ನೈಸರ್ಗಿಕ ಗುಣಧರ್ಮವನ್ನು ಹಾಳುಮಾಡಿದ್ದಾರೆ. ಇದರಿಂದ ಮಣ್ಣಿನಲ್ಲಿರುವ ಸೂಕ್ಷ್ಮಜೀವಿಗಳ ಸಂಖ್ಯೆ ಕಡಿಮೆಯಾಗಿ, ಭೂಮಿಯ ಫಲವತ್ತತೆಯ ಮೇಲೂ ದುಷ್ಪರಿಣಾಮ ಉಂಟಾಗುತ್ತಿದೆ. ನೈಸರ್ಗಿಕ ಕೃಷಿಯಲ್ಲಿ ಮಣ್ಣಿನ ಜೀವಂತಿಕೆಯನ್ನು ಉಳಿಸುವುದು ಅತ್ಯಂತ ಮುಖ್ಯವಾಗಿದೆ ಎಂದರು.

**ಮಣ್ಣಿನ ಆರೋಗ್ಯವೇ ಕೃಷಿಯ ಮೂಲ ಆಧಾರ:** ನಮ್ಮ ಪೂರ್ವಜರು ಜಮೀನಿನಲ್ಲಿ ಬೆಳೆಯುತ್ತಿದ್ದ ಕಳೆಗಳನ್ನು ಸಂಪನ್ಮೂಲವಾಗಿ ಬಳಸಿಕೊಂಡು, ಅವುಗಳನ್ನು ಕೊಳೆಸಿ ಗೊಬ್ಬರ ತಯಾರಿಸಿ ಮತ್ತೆ ಭೂಮಿಗೆ ಸೇರಿಸುತ್ತಿದ್ದರು. ಒಂದೇ ಬೆಳೆಗೆ ಸೀಮಿತವಾಗದೆ ವಿವಿಧ ಬೆಳೆಗಳನ್ನು ಮಿಶ್ರವಾಗಿ ಬೆಳೆಯುವ ಮೂಲಕ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಉತ್ತಮ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದರು. ಆದರೆ ಆಧುನಿಕ ಕೃಷಿಯ ಹೆಸರಿನಲ್ಲಿ ನಾವು ಇಂತಹ ಪದ್ಧತಿಗಳನ್ನು ಮರೆಯುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

**ಒಂದು ದೇಶಿ ತಳಿ ಹಸು ಕಟ್ಟಿಕೊಳ್ಳಿ:** ಒಂದು ದೇಶಿ ತಳಿಯ ಹಸುವಿನ ಮೂಲಕವೇ ಹಲವು ಎಕರೆ ಜಮೀನಿಗೆ ಅಗತ್ಯವಿರುವ ನೈಸರ್ಗಿಕ ಗೊಬ್ಬರ ತಯಾರಿಸಲು ಬೇಕಾದ ಸಂಪನ್ಮೂಲಗಳನ್ನು ಪಡೆದುಕೊಳ್ಳಬಹುದು. ಹಸುವಿನ ಸಗಣಿ, ಗಂಜಲ ಹಾಗೂ ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ವಸ್ತುಗಳನ್ನು ಬಳಸಿ ಜೀವಾಮೃತ, ಬೀಜಾಮೃತದಂತಹ ಸಿದ್ಧತೆಗಳನ್ನು ಮಾಡಿಕೊಳ್ಳುವ ಮೂಲಕ ಮಣ್ಣಿನ ಆರೋಗ್ಯ ಸುಧಾರಿಸಲು ಸಾಧ್ಯವಿದೆ. ಗೊಬ್ಬರ, ಬೀಜ ಹಾಗೂ ಔಷಧಿಗಳ ಬೆಲೆ ಏರಿಕೆ ವಿರುದ್ಧ ಹೋರಾಡುವುದರ ಜೊತೆಗೆ, ರೈತರು ತಮ್ಮ ಕೃಷಿಯನ್ನು ಸ್ವಾವಲಂಬಿಯನ್ನಾಗಿಸಿಕೊಳ್ಳುವತ್ತ ಗಮನಹರಿಸಬೇಕು. ಒಂದು ಹಸುವನ್ನು ಸಾಕಿಕೊಂಡು ಭೂಮಿಯ ಉಳಿವಿಗಾಗಿ ಹಾಗೂ ರೈತರ ಬದುಕಿನ ಭದ್ರತೆಗಾಗಿ ಪ್ರಯತ್ನಿಸುವುದು ಇಂದಿನ ಅನಿವಾರ್ಯತೆಯಾಗಿದೆ ಎಂದು ತಿಳಿಸಿದರು.

**ಭೂಮಿ ಆರೋಗ್ಯ ಕಾಪಾಡುವುದು ನಮ್ಮ ಹೊಣೆ:** ಸಹಾಯಕ ಕೃಷಿ ನಿರ್ದೇಶಕ ಗಣೇಶ ಕಮ್ಮಾರ ಮಾತನಾಡಿ, ಮನುಷ್ಯರಿಗೆ ಜೀವವಿರುವಂತೆ ಭೂಮಿಗೂ ಜೀವವಿದೆ. ಮನುಷ್ಯರು ಗಾಳಿ, ನೀರು ಹಾಗೂ ಆಹಾರದ ಮೂಲಕ ಬದುಕುವಂತೆ ಭೂಮಿಯೂ ಪ್ರಕೃತಿಯೊಂದಿಗಿನ ತನ್ನದೇ ಆದ ನೈಸರ್ಗಿಕ ಪ್ರಕ್ರಿಯೆಗಳ ಮೂಲಕ ಜೀವಂತಿಕೆಯನ್ನು ಉಳಿಸಿಕೊಳ್ಳುತ್ತದೆ. ಮಣ್ಣಿನ ಆರೋಗ್ಯವನ್ನು ನಿರ್ಲಕ್ಷಿಸಿ ನಿರಂತರವಾಗಿ ರಾಸಾಯನಿಕಗಳನ್ನು ಬಳಸುವುದರಿಂದ ಕೃಷಿಯ ಮೂಲಾಧಾರವೇ ದುರ್ಬಲವಾಗುತ್ತದೆ ಎಂದರು.

**ನೈಸರ್ಗಿಕ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸುವ ಗುರಿ:** ಹಾವೇರಿ ಜಿಲ್ಲಾ ರೈತ ಸಂಘದ ಮುಖಂಡ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿ, ಜಿಲ್ಲಾ ರೈತ ಸಂಘದ ವತಿಯಿಂದ ಸಾವಯವ ಹಾಗೂ ನೈಸರ್ಗಿಕ ಕೃಷಿ ಕುರಿತು ಈಗಾಗಲೇ ಎರಡನೇ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿಯೂ ಇಂತಹ ಹಲವು ಕಾರ್ಯಾಗಾರಗಳನ್ನು ಹಮ್ಮಿಕೊಂಡು ರೈತರಿಗೆ ನೈಸರ್ಗಿಕ ಕೃಷಿಯ ಬಗ್ಗೆ ಹೆಚ್ಚಿನ ಅರಿವು ಮೂಡಿಸಲಾಗುವುದು ಎಂದರು.

ಕಾರ್ಯಾಗಾರದಲ್ಲಿ ಶಂಕರಗೌಡ ಪಾಟೀಲ, ಚೆನ್ನಬಸಪ್ಪ ಶಿರೂರ, ಭೀಮಣ್ಣ ಚಿಗರಿ, ಗಂಗಾಧರ ಎಲಿ, ಶಿವಯೋಗಿ ಹೊಸಗೌಡ್ರ, ಗುಡ್ಡನಗೌಡ ಪ್ಯಾಟಿಗೌಡ್ರ, ಜಾನ್ ಪುನಿತ್, ಮೌನೇಶ ಕಮ್ಮಾರ, ವೀರಬಸಯ್ಯ ಹಾವೇರಿಮಠ, ಸುಭಾಸ ಬನ್ನಿಹಟ್ಟಿ, ಶಂಕ್ರಣ್ಣ ಶಿರಗಂಬಿ, ಪ್ರಭಾಕರ ಪ್ಯಾಟಿ, ಪ್ರಕಾಶ ಬನ್ನಿಹಟ್ಟಿ ಸೇರಿದಂತೆ ರೈತ ಸಂಘದ ಮುಖಂಡರು ಹಾಗೂ ರೈತರು ಉಪಸ್ಥಿತರಿದ್ದರು.




## ಶೌಚಾಲಯದಲ್ಲಿ ಪ್ರತ್ಯಕ್ಷವಾದ ಚಿಪ್ಪು ಹಂದಿ; ಅರಣ್ಯ ಇಲಾಖೆ ರಕ್ಷಣೆ

**ಹಾವೇರಿ:** ನಗರದ ಪ್ರವಾಸಿ ಮಂದಿರದ ಸಿಬ್ಬಂದಿ ಚಂದ್ರಪ್ಪ ಅವರ ಮನೆಯ ಶೌಚಾಲಯದಲ್ಲಿ ಅಪರೂಪದ ಚಿಪ್ಪು ಹಂದಿ ಕಾಣಿಸಿಕೊಂಡ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ.

ಚಂದ್ರಣ್ಣವರ ಮನೆಯ ಶೌಚಾಲಯದಲ್ಲಿ ಚಿಪ್ಪು ಹಂದಿ ಕಾಣಿಸಿಕೊಂಡಿರುವುದನ್ನು ಗಮನಿಸಿದ ಕುಟುಂಬಸ್ಥರು ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಪಡೆದ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ, ಚಿಪ್ಪು ಹಂದಿಯನ್ನು ಸುರಕ್ಷಿತವಾಗಿ ರಕ್ಷಿಸಿ ತಮ್ಮ ವಶಕ್ಕೆ ಪಡೆದುಕೊಂಡರು.

ಚಿಪ್ಪು ಹಂದಿ ಸಾಮಾನ್ಯವಾಗಿ ರಾತ್ರಿ ವೇಳೆ ಸಂಚರಿಸುವ ಪ್ರಾಣಿಯಾಗಿದ್ದು, ಇರುವೆ, ಗೆದ್ದಲು ಮುಂತಾದ ಕೀಟಗಳನ್ನು ಆಹಾರವಾಗಿ ಸೇವಿಸುತ್ತದೆ. ಅಪಾಯ ಎದುರಾದಾಗ ತನ್ನ ದೇಹವನ್ನು ಚೆಂಡಿನಂತೆ ಮಡಚಿಕೊಂಡು, ಗಟ್ಟಿಯಾದ ಚಿಪ್ಪುಗಳ ಮೂಲಕ ರಕ್ಷಿಸಿಕೊಳ್ಳುವುದು ಇದರ ವಿಶೇಷ ಗುಣವಾಗಿದೆ. ಅಕ್ರಮ ಬೇಟೆ ಮತ್ತು ಕಳ್ಳ ಸಾಗಣೆಯಿಂದಾಗಿ ಈ ಅಪರೂಪದ ವನ್ಯಜೀವಿ ಅಪಾಯದಲ್ಲಿದೆ. ಹೀಗಾಗಿ ಸಾರ್ವಜನಿಕರು ಇಂತಹ ಪ್ರಾಣಿಗಳು ಕಂಡುಬಂದಲ್ಲಿ ಅವುಗಳನ್ನು ಹಿಡಿಯಲು ಅಥವಾ ಹಾನಿ ಮಾಡಲು ಮುಂದಾಗದೆ ಅರಣ್ಯ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಅಕಾರಿಗಳು ತಿಳಿಸಿದ್ದಾರೆ.

**ಅರಣ್ಯ ಅಕಾರಿಗಳ ಕಾರ್ಯಾಚರಣೆ:** ಉಪ ಅರಣ್ಯ ಸಂರಕ್ಷಣಾಕಾರಿ ಅಕ್ಷಯ್ ಪ್ರಕಾಶಕರ ಅವರ ಮಾರ್ಗದರ್ಶನದಲ್ಲಿ, ಹಾವೇರಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಕಾರಿ ಕು. ಅನುಷಾ ಎಂ., ಹಾವೇರಿ ವಲಯದ ವಲಯ ಅರಣ್ಯಾಕಾರಿ ಸಿದ್ದಮ್ಮ ಕರಿಗಾರ, ಶಹರ ಉಪ ವಲಯ ಅರಣ್ಯಾಕಾರಿ ಮಂಜುನಾಥ ಹಂಡೇರ ಹಾಗೂ ಗುತ್ತಲ ಗಸ್ತು ಅರಣ್ಯ ಪಾಲಕ ಬಸವರಾಜ ಕುಲಕರ್ಣಿ ಅವರು ಸ್ಥಳಕ್ಕೆ ತೆರಳಿ ಚಿಪ್ಪು ಹಂದಿಯನ್ನು ಸುರಕ್ಷಿತವಾಗಿ ರಕ್ಷಿಸುವ ಕಾರ್ಯದಲ್ಲಿ



ಪಾಲ್ಗೊಂಡರು. ಅರಣ್ಯ ಇಲಾಖೆಯ ಸಿಬ್ಬಂದಿಯ ಸಮಯೋಚಿತ ಕಾರ್ಯಾಚರಣೆಯಿಂದ ಚಿಪ್ಪು ಹಂದಿಗೆ ಯಾವುದೇ ತೊಂದರೆಯಾಗದಂತೆ ರಕ್ಷಣೆ ಕಾರ್ಯವನ್ನು ಮಾಡಲಾಗಿದೆ.



## ಹರಿಹರದಲ್ಲಿ ಗಣೇಶ ಮೂರ್ತಿಗಳ ಭವ್ಯ ಸಾಮೂಹಿಕ ವಿಸರ್ಜನೆ

**ಹರಿಹರ:** ಗಣೇಶೋತ್ಸವದ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ನಗರದ ಪ್ರಮುಖ ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನಾ ಬೃಹತ್ ಶೋಭಾಯಾತ್ರೆಗೆ ನಗರ ಭಾನುವಾರ ಸಾಕ್ಷಿಯಾಯಿತು. ಹಿಂದೂ ಜಾಗರಣ ವೇದಿಕೆ, ಹಿಂದೂ ಮಹಾ ಗಣಪತಿ ಉತ್ಸವ ಸಮಿತಿ ಹಾಗೂ ಸಾರ್ವಜನಿಕ ವಿನಾಯಕ ಸಮಿತಿಗಳ ನೇತೃತ್ವದಲ್ಲಿ ನಗರದ ಪ್ರಮುಖ 8 ಗಣೇಶ ಮೂರ್ತಿಗಳ ವಿಸರ್ಜನಾ ಶೋಭಾಯಾತ್ರೆ ಭಾರಿ ಪೊಲೀಸ್ ಬಂದೋಬಸ್ತ್ ನಡುವೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಹರಿಹರ ನಗರದಲ್ಲಿ ಭಾದ್ರಪದ ಮಾಸದ ಕೃಷ್ಣ ಪಕ್ಷದ ನವಮಿಯ ಭಾನುವಾರ ಅಷ್ಟ ಗಣಪತಿಗಳ ವಿಸರ್ಜನಾ ಕಾರ್ಯ ಐತಿಹಾಸಿಕವಾಗಿ ನಡೆದು ನಿಜಕ್ಕೂ ಹೊಸದೊಂದು ಇತಿಹಾಸವನ್ನೇ ಸೃಷ್ಟಿ ಮಾಡಿದ್ದಂತು ಸುಳ್ಳಲ್ಲ.ಸುಮಾರು 20 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು ಭಕ್ತಾದಿಗಳು ಭಾಗವಹಿಸಿ ಅತ್ಯಂತ ಯಶಸ್ವಿಯಾಗಿ ವಿಸರ್ಜನಾ ಕಾರ್ಯಕ್ರಮ ನಡೆದು ಹರಿಹರದ ಜನತೆಗೆ ಹೊಸದೊಂದು ಮಜಲನ್ನೇ ಸೃಷ್ಟಿಸಿತು.

**ಅಕ್ಕಪಕ್ಕದ ಜಿಲ್ಲೆಗಳಿಂದ ಆಗಮಿಸಿದ ಭಾರಿ ಜನಸ್ತೋಮ :** ಹರಿಹರದಲ್ಲಿ ಇದೇ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಗಣೇಶ ಮೂರ್ತಿಗಳ ವಿಸರ್ಜನಾ ಶೋಭಾಯಾತ್ರೆ ಆಯೋಜನೆಯಾಗಿದ್ದರಿಂದ, ದಾವಣಗೆರೆ ಸೇರಿದಂತೆ ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳ ಹಲವು ತಾಲೂಕುಗಳಿಂದ ಹಾಗೂ ಹರಿಹರ ತಾಲೂಕಿನ ಬಹುತೇಕ ಗ್ರಾಮಗಳಿಂದ ಭಾರಿ ಸಂಖ್ಯೆಯಲ್ಲಿ ಭಕ್ತರು ನಗರಕ್ಕೆ ಆಗಮಿಸಿದ್ದರು. ರಜಾದಿನವಾದ ಭಾನುವಾರವೂ ಆಗಿದ್ದರಿಂದ ನಗರದಲ್ಲಿ ಹೆಚ್ಚಿನ ಜನಸಾಗರವೇ ಕಂಡುಬಂದಿತು.

ಶಾಸಕ ಬಿ.ಪಿ. ಹರೀಶ ಮಾತನಾಡಿ, ಹಿಂದೂ ಮಹಾ ಗಣಪತಿ ಹಾಗೂ ಸಾರ್ವಜನಿಕ ಗಣೇಶ ವಿಸರ್ಜನಾ ಬೃಹತ್ ಶೋಭಾಯಾತ್ರೆಯಲ್ಲಿ ಪಾಲ್ಗೊಂಡ ಸರ್ವರಿಗೂ ಶ್ರೀ ಗಣೇಶನು ಶುಭ ಹಾರೈಸಲಿ. ಭಕ್ತರಿಗೆ ಅನ್ನಸಂತರ್ಪಣೆ, ತಂಪುಪಾನೀಯ, ಕುಡಿಯುವ ನೀರು, ಮಜ್ಜಿಗೆ ಸೇರಿದಂತೆ ವಿವಿಧ ಸೇವೆಗಳನ್ನು ಒದಗಿಸಿದ ಎಲ್ಲರಿಗೂ ಅಭಿನಂದನೆಗಳು ಎಂದರು. ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ, ಗೃಹರಕ್ಷಕ ದಳದ ಸಿಬ್ಬಂದಿ, ವಿವಿಧ ಸಮಿತಿಗಳ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಅವರು ಕೃತಜ್ಞತೆ ಸಲ್ಲಿಸಿದರು.

**ವ್ಯಾಪಾರಸ್ಥರಿಂದ ಭಕ್ತರಿಗೆ ಆತ್ಮೀಯ ಸ್ವಾಗತ :** ಬೃಹತ್ ಶೋಭಾಯಾತ್ರೆಯ ಹಿನ್ನೆಲೆಯಲ್ಲಿ ನಗರದ ಸಣ್ಣ, ಅತಿ ಸಣ್ಣ ವ್ಯಾಪಾರಸ್ಥರು, ಬೀದಿಬದಿ ವ್ಯಾಪಾರಿಗಳು, ವಿವಿಧ ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರು ಭಕ್ತರಿಗೆ ಉಪಾಹಾರ ಮತ್ತು ಪಾನೀಯಗಳ ವ್ಯವಸ್ಥೆ ಮಾಡಿದ್ದರು.

ನಗರದ ವಿವಿಧೆಡೆ ಅಂಗಡಿಗಳ ಮುಂದೆ ಶಾಮಿಯಾನ ಹಾಕಿ ಬೆಳಗ್ಗಿನಿಂದಲೇ ದೋಸೆ, ಪುಳಿಯೋಗರೆ,ಉಪ್ಪಿಟ್ಟು, ಗೋದಿ ಪಾಯಸ ,ಪಲಾವು, ಮಜ್ಜಿಗೆ, ತಂಪುಪಾನೀಯ ಹಾಗೂ ಶುದ್ಧ ಕುಡಿಯುವ ನೀರಿನ ಬಾಟಲಿಗಳಲ್ಲಿ ವಿತರಿಸಲಾಯಿತು.

ಶೋಭಾಯಾತ್ರೆಯಲ್ಲಿ ಭಾಗವಹಿಸಿದ ಭಕ್ತರಿಗೆ ಶುಭ ಹಾರೈಸುವ ಮೂಲಕ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ತಮ್ಮ ಅಭಿಮಾನ ಮತ್ತು ಸಹಕಾರವನ್ನು ವ್ಯಕ್ತಪಡಿಸಿದರು.

ಶೋಭಾಯಾತ್ರೆ ಸಾಗುವ ಮಾರ್ಗದಲ್ಲಿನ ಹಲವು ಅಂಗಡಿ–ಮುಂಗಟ್ಟುಗಳ ವ್ಯಾಪಾರಸ್ಥರು ಸ್ವಯಂಪ್ರೇರಿತರಾಗಿ ಅಂಗಡಿಗಳನ್ನು ಮುಚ್ಚಿ ಶೋಭಾಯಾತ್ರೆಯಲ್ಲಿ ಪಾಲ್ಗೊಂಡು ಭಕ್ತರಿಗೆ ಶುಭ ಕೋರಿದ್ದು ವಿಶೇಷವಾಗಿತ್ತು.

**ಸಾರ್ವಜನಿಕರನ್ನು ಆಕರ್ಷಿಸಿದ ಬೃಹತ್ ಮಹಾದ್ವಾರಗಳು :** ನಗರದ ವೀರರಾಣಿ ಕಿತ್ತೂರು ಚನ್ನಮ್ಮ ವೃತ್ತದಲ್ಲಿ ನಿರ್ಮಿಸಲಾಗಿದ್ದ 25 ಅಡಿಗೂ ಹೆಚ್ಚು ಎತ್ತರದ ಪಂಚಮುಖಿ ವೀರಾಂಜನೇಯ ಮಹಾದ್ವಾರ ಭಕ್ತರ ಗಮನ ಸೆಳೆಯಿತು. ಅನ್ನದಾತ ರೈತರ ಹೆಸರಿನಲ್ಲಿ ನಿರ್ಮಿಸಲಾಗಿದ್ದ ಮತ್ತೊಂದು ಮಹಾದ್ವಾರವೂ ವಿಶೇಷ ಆಕರ್ಷಣೆಯಾಗಿತ್ತು. ಮಹಾತ್ಮ ಗಾಂಧಿ ವೃತ್ತದಲ್ಲಿ ಅಜಾನುಬಾಹುವಾಗಿ ಗದಾಧಾರಿಯಾಗಿ ವೀರಾವೇಶದಿಂದ ನಿಂತಿರುವ ಆಂಜನೇಯನ ಪ್ರತಿಮೆಯ ಬಳಿಯೂ ಭಕ್ತರು ಹಾಗೂ ಸಾರ್ವಜನಿಕರು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

**ಬರ ನಿವಾರಣೆಗೆ ಗಣೇಶನಲ್ಲಿ ಪ್ರಾರ್ಥನೆ :** ಶೋಭಾಯಾತ್ರೆಗೆ ಶುಭ ಹಾರೈಸಲು ಆಗಮಿಸಿದ್ದ ಶಾಸಕರು ಹಾಗೂ ಗಣ್ಯರು, ಈ ಬಾರಿ ಬರಗಾಲದ ಸಂಕಷ್ಟವನ್ನು ಜನರು ಅನುಭವಿಸಿದ್ದು, ಶ್ರೀ ವಿಘ್ನೇಶ್ವರನ ಕೃಪೆಯಿಂದ ಮುಂದಿನ ದಿನಗಳಲ್ಲಿ ಸಮೃದ್ಧಿ ನೆಲೆಸಲಿ ಎಂದು ಪ್ರಾರ್ಥಿಸಿದರು. ಹರಿಹರ ಕ್ಷೇತ್ರದ ಎಲ್ಲ ಕೆರೆ–ಕಟ್ಟೆಗಳು ನೀರಿನಿಂದ ತುಂಬಿ ತುಳುಕಲಿ, ರೈತರಿಗೆ ಉತ್ತಮ ಮಳೆ–ಬೆಳೆ ದೊರೆಯಲಿ, ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ದೂರವಾಗಲಿ ಹಾಗೂ ಕ್ಷೇತ್ರ ಸಮೃದ್ಧಿ ಮತ್ತು ಸಂಪದ್ಭರಿತವಾಗಲಿ ಎಂದು ಗಣೇಶನಲ್ಲಿ ಪ್ರಾರ್ಥಿಸಿದರು.

**ಇಡೀ ಹರಿಹರವೇ ಕೇಸರಿಮಯ :** ನಗರದ ಪೇಟೆ ಆಂಜನೇಯ ದೇವಸ್ಥಾನದಿಂದ ಆರಂಭವಾದ ಶೋಭಾಯಾತ್ರೆ ಪ್ರಮುಖ ರಸ್ತೆಗಳಲ್ಲಿ ಸಾಗಿತು. ಡಿಜೆ ಗಳ ಸಂಗೀತದ ತಾಳಕ್ಕೆ ಯುವಕರು, ಯುವತಿಯರು, ಮಹಿಳೆಯರು ಹಾಗೂ ಮಕ್ಕಳು ಸಂಭ್ರಮದಿಂದ ಹೆಜ್ಜೆ ಹಾಕಿದರು. ಶೋಭಾಯಾತ್ರೆಯಲ್ಲಿ ಪಾಲ್ಗೊಂಡ ಬಹುತೇಕರು ಕೇಸರಿ ಶಾಲು ಧರಿಸಿದ್ದರು.ನಗರದ ಪ್ರಮುಖ ರಸ್ತೆಗಳು ಕೇಸರಿ ಧ್ವಜಗಳಿಂದ ಅಲಂಕೃತಗೊಂಡಿದ್ದರಿಂದ ಇಡೀ ಹರಿಹರ ನಗರವೇ ಕೇಸರಿಮಯವಾಗಿ ಕಂಗೊಳಿಸಿತು.

ಶೋಭಾಯಾತ್ರೆಯಲ್ಲಿ ಮಾಜಿ ಸಚಿವ ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್,ಮಾಜಿ ಶಾಸಕ ಎಚ್.ಎಸ್. ಶಿವಶಂಕರ್,ಎಸ್.ರಾಮಪ್ಪ, ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಪ್ರಮುಖ ಹೆಚ್. ದಿನೇಶ್, ಸ್ವಾತಿ ಹನುಮಂತಪ್ಪ, ನಿತ್ಯಾನಂದ, ಸುಧಾ ಸೋಳಂಕಿ, ಸಾರ್ವಜನಿಕ ವಿನಾಯಕ ಮಹೋತ್ಸವ ಸಮಿತಿ ಗೌರವಾಧ್ಯಕ್ಷ ಎನ್.ಎಚ್.ಶ್ರೀನಿವಾಸ್ ನಂದಿಗಾವಿ, ಅಧ್ಯಕ್ಷ ಆರ್.ವಿಜಯ್ ಕುಮಾರ್, ಪ್ರಧಾನ ಕಾರ್ಯದರ್ಶಿ ಸಚಿನ್ ಕೊಂಡಜ್ಜಿ,ಖಜಾಂಚಿ ಬಸವರಾಜ್, ಗೌರವ ಸಲಹೆಗಾರ ಸಂತೋಷ್ ನೋಟದವರ, ಮಂಜುನಾಥ ರಟ್ಟಿಹಳ್ಳಿ, ಶೇಖರ ಗೌಡ ಪಾಟೀಲ್, ಕೃಷ್ಣ ರಾಜೋಳಿ, ಪ್ರಶಾಂತ್ ಹರ್ನೆ, ಚಂದನ್ ಮೂರ್ಕಲ್, ಶಿವು, ಅದ್ವೈತ್ ಶಾಸ್ತ್ರಿ, ಭರತ್,ಸಚಿನ್,ಮೊಬೈಲ್ ಶಿವು, ಆದಿತ್ಯ ಮೆಹರ್ವಾಡೆ, ಕಾರ್ತಿಕ್,ಯೋಗೇಶ್,ಸಾಮ್ರಾಟ್, ಸಂತೋಷ್ ಗುಡಿಮನಿ, ಅಣ್ಣಪ್ಪ ಲೋಕಿಕೆರೆ, ಜಿ.ಪಿ. ಸಂಜೀವ ಗೌಡ, ಶಿವು ಬೊಂದಿ, ಅರುಣ್ ಕುಮಾರ್, ತಿಪ್ಪೇಶ್, ಪಾಲಣ್ಣ, ವಿನಯ್, ವಿನಾಯಕ, ನಾರಾಯಣ ನಾಣಿ, ನಿಧಿ, ಚಂದ್ರಕಾಂತ ಗೌಡ ಸೇರಿದಂತೆ ವಿವಿಧ ಸಮಿತಿಗಳ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

### ಸ್ಮರಣೀಯ ದಿನ

**ನಗರದ ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರ ಮಹಾಪೂರ, ಕೇಸರಿ ಧ್ವಜಗಳಿಂದ ಅಲಂಕರಿಸಿದ ಪ್ರಮುಖ ರಸ್ತೆಗಳು, ಸಂಗೀತದ ಸಂಭ್ರಮ, ಧಾರ್ಮಿಕ ಘೋಷಣೆಗಳು, ಬೃಹತ್ ಮಹಾದ್ವಾರಗಳು, ಅನ್ನದಾಸೋಹ ಹಾಗೂ ಸಾರ್ವಜನಿಕರ ಸ್ವಯಂಪ್ರೇರಿತ ಸಹಕಾರ– ಇವೆಲ್ಲವೂ ಸೇರಿ ಹರಿಹರದ ಗಣೇಶೋತ್ಸವದ ಇತಿಹಾಸದಲ್ಲಿ ಈ ದಿನವನ್ನು ಸ್ಮರಣೀಯವಾಗಿಸಿತು. ನಗರದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಇತಿಹಾಸದಲ್ಲಿ ಈ ವರ್ಷದ ಗಣೇಶ ವಿಸರ್ಜನಾ ಬೃಹತ್ ಶೋಭಾಯಾತ್ರೆ ಹೊಸ ಅಧ್ಯಾಯವನ್ನೇ ಬರೆದಿದೆ ಎಂಬ ಅಭಿಪ್ರಾಯ ಸಾರ್ವಜನಿಕರಿಂದ ವ್ಯಕ್ತವಾಯಿತು.**

### ಖಾಕಿ ಬಂದೋಬಸ್ತ್

**ಇಂದು ನಡೆದ ವಿಶೇಷ ಸಜ್ಜನ ಯಾತ್ರೆಯಲ್ಲಿ ಪೊಲೀಸ್ ಬಂದೋಬಸ್ತ್ ಉತ್ತಮವಾಗಿತ್ತು ಒಬ್ಬ ಎಸ್ಪಿ, ಒಬ್ಬ ಎಎಸ್‌ಪಿ ಮೂರು ಜನ ಡಿವೈಎಸ್‌ಪಿ 15 ಜನ ಸಿಪಿಐ, 31 ಜನ ಪಿಎಸ್‌ಐ ಗಳು 54 ಜನ ಎ ಎಸ್ ಐ ಗಳು 20 ಜನ ಮಹಿಳಾ ಪ್ರೀತಿಗಳು 100 ಜನ ಹೋಂ ಗಾರ್ಡ್ಸ್ ಗಳು ಕೆ.ಎಸ್. ಆರ್.ಪಿ ಯ 5 ತಕಡಿಗಳು ಮತ್ತು ಡಿಎಆರ್ ನ 4 ತುಕಡಿಗಳು ಸೇರಿದಂತೆ ನಗರದಾದ್ಯಂತ 25ಕ್ಕೂ ಹೆಚ್ಚು ಸಿಸಿ ಕ್ಯಾಮೆರಾ ಮತ್ತು 3ಕ್ಕೂ ಹೆಚ್ಚು ವಿಡಿಯೋ ಚಿತ್ರೀಕರಣದ ಜೊತೆಗೆ 2 ಡ್ರೋನ್ ಕ್ಯಾಮೆರಾಗಳ ಚಿತ್ರೀಕರಣ ಮಾಡುವ ವ್ಯವಸ್ಥೆ ಮಾಡಲಾಗಿತ್ತು.**

### ಭಕ್ತಿ ನಾದದಲ್ಲಿ ಮಿಂದೆದ್ದ ಹರಿಹರ

**ಈ ಬಾರಿಯ ಶೋಭಾಯಾತ್ರೆಯಲ್ಲಿ ಎಂಟು ಡಿಜೆಗಳ ಅಬ್ಬರ ಹರಿಹರ ನಗರವನ್ನೇ ಸಂಭ್ರಮ ಮತ್ತು ಭಕ್ತಿ ನಾದದಲ್ಲಿ ಜನರನ್ನು ಮೊಳಗಿಸಿತು.ವಿಶೇಷವಾಗಿ ಮಹಿಳೆಯರಿಗಾಗಿ ಪ್ರತ್ಯೇಕವಾಗಿ ಆಯೋಜಿಸಿದ್ದ ಡಿಜೆಗಳಲ್ಲಿ ಮಹಿಳೆಯರು, ಮಕ್ಕಳು, ಯುವತಿಯರು ಹಾಗೂ ಮಹಾಮಾತೆಯರು ಸಹ ಭಕ್ತಿಪರಶರಾಗಿ ನೃತ್ಯ ಮಾಡುವ ಮೂಲಕ ರಾಜ ಬೀದಿ ಉತ್ಸವಕ್ಕೆ ಹೊಸ ಕಳೆಯನ್ನೇ ತಂದರು.**

**ಶೋಭಾಯಾತ್ರೆಯಲ್ಲಿ ಪಾಲ್ಗೊಂಡ ಭಕ್ತರು 'ಜೈ ಶ್ರೀರಾಮ್', 'ಜೈ ಜೈ ರಾಮ್', 'ಗಣೇಶೋತ್ಸವಕ್ಕೆ ಶುಭವಾಗಲಿ', 'ನಾವೆಲ್ಲ ಹಿಂದೂ, ನಾವೆಲ್ಲ ಒಂದು' ಎಂಬ ಘೋಷಣೆಗಳನ್ನು ಮೊಳಗಿಸುತ್ತಾ ಸಾಗಿದರು.**

ಸಮಾಲೋಚನೆ ಸುದ್ದಿ
SAMALOCHANE RANEBENNURSUDDI
Kannada Daily Morning

# ಮೂತ್ರಪಿಂಡದ ಆರೋಗ್ಯ: ಮೌನವಾಗಿ ಹಾನಿಯಾಗುವ ಮುನ್ನ ಎಚ್ಚರವಾಗಿರಿ

। ಮೂತ್ರಪಿಂಡದ ಕಾಯಿಲೆ ಆರಂಭಿಕ ಹಂತದಲ್ಲಿ ಲಕ್ಷಣವಿಲ್ಲದೇ ಇರಬಹುದು
। ಅಪಾಯ ಇರುವವರಲ್ಲಿ ಸಮಯೋಚಿತ ಪರೀಕ್ಷೆಯೇ ಉತ್ತಮ ರಕ್ಷಣೆ

ಮೂತ್ರಪಿಂಡಗಳು (Kidneys) ಕೇವಲ ಮೂತ್ರ ಉತ್ಪಾದಿಸುವ ಅಂಗಗಳಲ್ಲ. ಅವು ರಕ್ತದಲ್ಲಿನ ತ್ಯಾಜ್ಯ ಪದಾರ್ಥಗಳು ಮತ್ತು ಹೆಚ್ಚುವರಿ ದ್ರವವನ್ನು ಹೊರಹಾಕುವುದರ ಜೊತೆಗೆ ದೇಹದ ನೀರು–ಲವಣಗಳ ಸಮತೋಲನ, ಆಮ್ಲಕ್ಷಾರ ಸಮತೋಲನ ಮತ್ತು ರಕ್ತದೊತ್ತಡ ನಿಯಂತ್ರಣದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕೆಂಪು ರಕ್ತಕಣಗಳ ಉತ್ಪಾದನೆ ಹಾಗೂ ಎಲುಬಿನ ಆರೋಗ್ಯಕ್ಕೆ ಸಂಬಂಧಿಸಿದ ಕೆಲವು ಹಾರ್ಮೋನಲ್ ಪ್ರಕ್ರಿಯೆಗಳಲ್ಲಿಯೂ ಅವುಗಳ ಪಾತ್ರವಿದೆ.



ಮೂತ್ರಪಿಂಡದ ಕಾಯಿಲೆಗಳ ಪ್ರಮುಖ ಸವಾಲೆಂದರೆ ಆರಂಭಿಕ ಹಂತದಲ್ಲಿ ಸ್ಪಷ್ಟ ಲಕ್ಷಣಗಳೇ ಕಾಣಿಸದಿರುವುದು. ಕೆಲವರಿಗೆ ಸಮಸ್ಯೆ ಪತ್ತೆಯಾಗುವ ವೇಳೆಗೆ ಮೂತ್ರಪಿಂಡದ ಕಾರ್ಯಕ್ಷಮತೆ ಈಗಾಗಲೇ ಗಮನಾರ್ಹವಾಗಿ ಕಡಿಮೆಯಾಗಿರಬಹುದು. ಆದ್ದರಿಂದ ವಿಶೇಷವಾಗಿ ಅಪಾಯ ಹೊಂದಿರುವವರು ಲಕ್ಷಣ ಬರುವವರೆಗೆ ಕಾಯದೆ ಸೂಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ಮುಖ್ಯ.

**ಮೂತ್ರಪಿಂಡದ ಹಾನಿಗೆ ಪ್ರಮುಖ ಕಾರಣಗಳು ಯಾವುವು?:** ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ದೀರ್ಘಕಾಲೀನ ಮೂತ್ರಪಿಂಡ ಕಾಯಿಲೆಗೆ ಪ್ರಮುಖ ಕಾರಣಗಳಾಗಿವೆ. ಇದರ ಜೊತೆಗೆ ಕೆಲವು ಕೀಲು/ರೋಗನಿರೋಧಕ ಕಾಯಿಲೆಗಳು, ಮರುಕಳಿಸುವ ಮೂತ್ರನಾಳದ ಸಮಸ್ಯೆಗಳು, ಮೂತ್ರದ ಹರಿವಿಗೆ ಅಡ್ಡಿ, ಕೆಲವು ಅನುವಂಶಿಕ ಕಾಯಿಲೆಗಳು ಹಾಗೂ ಮೂತ್ರಪಿಂಡಕ್ಕೆ ಹಾನಿ ಉಂಟುಮಾಡಬಲ್ಲ ಔಷಧಿಗಳ ಅಸಮರ್ಪಕ ಬಳಕೆಯೂ ಕಾರಣವಾಗಬಹುದು.

ವಿಶೇಷವಾಗಿ ನೋವು ನಿವಾರಕ ಮಾತ್ರೆಗಳನ್ನು (NSAIDs) ಪದೇಪದೇ ಸ್ವಯಂ ಸೇವಿಸುವುದು ಕೆಲವು ವ್ಯಕ್ತಿಗಳಲ್ಲಿ ಮೂತ್ರಪಿಂಡದ ಕಾರ್ಯದ ಮೇಲೆ ದುಷ್ಪರಿಣಾಮ ಬೀರಬಹುದು. ಈಗಾಗಲೇ ಮೂತ್ರಪಿಂಡ ಕಾಯಿಲೆ, ಮಧುಮೇಹ, ಹೃದಯ ವೈಫಲ್ಯ ಅಥವಾ ನಿರ್ಜಲೀಕರಣ ಇರುವವರಲ್ಲಿ ಹೆಚ್ಚಿನ ಎಚ್ಚರಿಕೆ ಅಗತ್ಯ.

**ಯಾವ ಲಕ್ಷಣಗಳನ್ನು ನಿರ್ಲಕ್ಷಿಸಬಾರದು?:** ಮೂತ್ರಪಿಂಡದ ಕಾಯಿಲೆ ಮುಂದುವರಿದಂತೆ ಕಾಲು ಅಥವಾ ಮುಖದಲ್ಲಿ ಊತ, ಅತಿಯಾದ ಆಯಾಸ, ಹಸಿವು ಕಡಿಮೆಯಾಗುವುದು, ವಾಕರಿಕೆ, ಉಸಿರಾಟದ ತೆ–ಊಂದರೆ, ಮೂತ್ರದ ಪ್ರಮಾಣ ಅಥವಾ ಸ್ವರೂಪದಲ್ಲಿ ಬದಲಾವಣೆ ಮುಂತಾದ ಲಕ್ಷಣಗಳು ಕಾಣಿಸಬಹುದು.



। ಡಾ. ನಾಗರಾಜ್ ಎಸ್. ಕೆ.
ಎಂ.ಬಿ.ಬಿ.ಎಸ್., ಎಂ.ಡಿ. (ಜನರಲ್ ಮೆಡಿಸಿನ್)
ಸಿದ್ಧಗಂಗ ಆಸ್ಪತ್ರೆ, ರಾಣೆಬೆನ್ನೂರು

ಮೂತ್ರದಲ್ಲಿ ರಕ್ತ ಕಾಣಿಸಿಕೊಳ್ಳುವುದು, ನಿರಂತರವಾಗಿ ನೊರೆ ಹೆಚ್ಚಾಗಿ ಕಾಣಿಸಿಕೊಳ್ಳುವುದು ಅಥವಾ ಮೂತ್ರ ವಿಸರ್ಜನೆಯಲ್ಲಿ ಗಮನಾರ್ಹ ಬದಲಾವಣೆಗಳಿದ್ದರೆ ವೈದ್ಯಕೀಯ ಮೌಲ್ಯಮಾಪನ ಅಗತ್ಯ.

ಆದರೆ ಮುಖ್ಯವಾಗಿ ನೆನಪಿಡಬೇಕಾದುದು– ಲಕ್ಷಣಗಳಿಲ್ಲದಿದ್ದರೆ ಮೂತ್ರಪಿಂಡಗಳು ಸಂಪೂರ್ಣ ಆರೋಗ್ಯವಾಗಿವೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

**Creatinine ಮಾತ್ರವೇ Kidney Health Report ಅಲ್ಲ:** ರಕ್ತದಲ್ಲಿನ Serum Creatinine ಮೂತ್ರಪಿಂಡದ ಕಾರ್ಯವನ್ನು ಅಂದಾಜಿಸಲು ಉಪಯುಕ್ತವಾದ ಪರೀಕ್ಷೆ. ಆದರೆ Creatinine ಒಂದನ್ನೇ ನೋಡಿ ಸಂಪೂರ್ಣ ನಿರ್ಧಾರಕ್ಕೆ ಬರುವುದು ಸರಿಯಲ್ಲ.

Creatinine eÉÆvÉUÉ eGFR (estimated Glomerular Filtration Rate) ಮೂತ್ರಪಿಂಡದ filtration ಸಾಮರ್ಥ್ಯವನ್ನು ಅಂದಾಜಿಸಲು ಸಹಾಯ ಮಾಡುತ್ತದೆ. ಮೂತ್ರದಲ್ಲಿನ Albumin/Protein ಪರೀಕ್ಷೆಯೂ ಆರಂಭಿಕ ಮೂತ್ರಪಿಂಡ ಹಾನಿಯನ್ನು ಗುರುತಿಸಲು ಮಹತ್ವದ್ದಾಗಿದೆ.

ವಿಶೇಷವಾಗಿ ಮಧುಮೇಹ ಅಥವಾ ಅಧಿಕ ರಕ್ತದೊತ್ತಡ ಇರುವವರಲ್ಲಿ ವೈದ್ಯರ ಸಲಹೆಯಂತೆ Urine Albumin-to-Creatinine Ratio (UACR) ಮುಂತಾದ ಪರೀಕ್ಷೆಗಳು ಉಪಯುಕ್ತವಾಗಬಹುದು.

"Creatinine normal ಇದೆ" ಎಂಬ ಒಂದೇ ವರದಿಯಿಂದ ಪ್ರತಿಯೊಬ್ಬರಲ್ಲೂ ಮೂತ್ರಪಿಂಡದ ಆರಂಭಿಕ ಹಾನಿಯನ್ನು ಸಂಪೂರ್ಣವಾಗಿ ಹೊರತುಪಡಿಸಲು ಸಾಧ್ಯವಿಲ್ಲ.

**ಮಧುಮೇಹ ಮತ್ತು ರಕ್ತದೊತ್ತಡ ನಿಯಂತ್ರಣ ಏಕೆ ಮುಖ್ಯ?:** ದೀರ್ಘಕಾಲದ ಹೆಚ್ಚಿದ ರಕ್ತದ ಸಕ್ಕರೆ ಮೂತ್ರಪಿಂಡದ ಸೂಕ್ಷ್ಮ ರಕ್ತನಾಳಗಳಿಗೆ ಹಾನಿ ಉಂಟುಮಾಡಬಹುದು. ಅದೇ ರೀತಿ ನಿಯಂತ್ರಣದಲ್ಲಿಲ್ಲದ ಅಧಿಕ ರಕ್ತದೊತ್ತಡವೂ ಮೂತ್ರಪಿಂಡದ ಹಾನಿಯನ್ನು ವೇಗಗೊಳಿಸಬಹುದು.

ಆದ್ದರಿಂದ ಮೂತ್ರಪಿಂಡದ ರಕ್ಷಣೆಗೆ "Kidney tonic"ಗಿಂತ ಮಧುಮೇಹ ಮತ್ತು ರಕ್ತದೊತ್ತಡವನ್ನು ಸಮರ್ಪಕವಾಗಿ ನಿಯಂತ್ರಿಸುವುದು ಹೆಚ್ಚು ಮಹತ್ವದ್ದು.

ವೈದ್ಯರು ಸೂಚಿಸಿದ ಔಷಧಿಗಳನ್ನು ನಿಯಮಿತವಾಗಿ ಸೇವಿಸುವುದು ಮತ್ತು ಅವುಗಳನ್ನು ಸ್ವಯಂ ನಿಲ್ಲಿಸದಿರುವುದು ಅಗತ್ಯ.

ಹೆಚ್ಚು ನೀರು ಕುಡಿದರೆ ಮೂತ್ರಪಿಂಡ ಯಾವಾಗಲೂ ಆರೋಗ್ಯವಾಗುತ್ತದೆಯೇ?

ಇದು ಸಾಮಾನ್ಯವಾಗಿ ಇರುವ ತಪ್ಪು ಕಲ್ಪನೆ.

ದೇಹಕ್ಕೆ ಅಗತ್ಯವಿರುವಷ್ಟು ದ್ರವ ಸೇವಿಸುವುದು ಮುಖ್ಯ. ಆದರೆ "ಹೆಚ್ಚು ನೀರು = ಹೆಚ್ಚು ಆರೋಗ್ಯಕರ ಮೂತ್ರಪಿಂಡ" ಎಂಬ ಸರಳ ಸೂತ್ರ ಸರಿಯಲ್ಲ. ದ್ರವದ ಅವಶ್ಯಕತೆ ಹವಾಮಾನ, ದೈಹಿಕ ಚಟುವಟಿಕೆ, ಆರೋಗ್ಯ ಸ್ಥಿತಿ ಮತ್ತು ಇತರ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಹೃದಯ ವೈಫಲ್ಯ ಅಥವಾ ಮುಂದುವರಿದ ಮೂತ್ರಪಿಂಡ ಕಾಯಿಲೆಯಂತಹ ಕೆಲವು ಸ್ಥಿತಿಗಳಲ್ಲಿ ವೈದ್ಯರು ದ್ರವ ಸೇವನೆಯನ್ನು ನಿಯಂತ್ರಿಸಲು ಸೂಚಿಸಬಹುದು. ಆದ್ದರಿಂದ ಎಲ್ಲರಿಗೂ ಒಂದೇ ಪ್ರಮಾಣದ ನೀರನ್ನು ಕಡ್ಡಾಯವಾಗಿ ಶಿಫಾರಸು ಮಾಡುವುದು ಸೂಕ್ತವಲ್ಲ.

**ಉಪ್ಪಿನ ಬಳಕೆ ಕಡಿಮೆ ಮಾಡುವುದು ಏಕೆ ಮುಖ್ಯ?:** ಅತಿಯಾದ ಉಪ್ಪಿನ ಸೇವನೆ ರಕ್ತದೊತ್ತಡ ಹೆಚ್ಚಲು ಮತ್ತು ದೇಹದಲ್ಲಿ ದ್ರವ ಸಂಗ್ರಹವಾಗಲು ಕಾರಣವಾಗಬಹುದು. ವಿಶೇಷವಾಗಿ ಅಧಿಕ ರಕ್ತದೊತ್ತಡ ಅಥವಾ ಮೂತ್ರಪಿಂಡದ ಸಮಸ್ಯೆ ಇರುವವರು ಉಪ್ಪಿನ ಸೇವನೆಯನ್ನು ನಿಯಂತ್ರಿಸುವುದು ಮುಖ್ಯ.

ಪ್ಯಾಕೆಟ್ ಆಹಾರ, ಉಪ್ಪಿನಕಾಯಿ, processed food ಮತ್ತು ಹೆಚ್ಚು odium ಇರುವ ಸಿದ್ಧ ಆಹಾರಗಳಲ್ಲಿ ಅಡಗಿರುವ ಉಪ್ಪಿನ ಪ್ರಮಾಣಕ್ಕೂ ಗಮನ ಕೊಡಬೇಕು.

Protein ಸಂಪೂರ್ಣ ನಿಲ್ಲಿಸಬೇಕೇ?

ಇಲ್ಲ. ಮೂತ್ರಪಿಂಡದ ಕಾಯಿಲೆ ಇದೆ ಎಂದು ಸ್ವಯಂ ಪ್ರೋಟೀನ್ ಆಹಾರವನ್ನು ಸಂಪೂರ್ಣ ನಿಲ್ಲಿಸುವುದು ಪೌಷ್ಟಿಕಾಂಶದ ಕೊರತೆಗೆ ಕಾರಣವಾಗಬಹುದು.

ಪ್ರೋಟೀನ್ ಅವಶ್ಯಕತೆ ಮೂತ್ರಪಿಂಡದ ಕಾಯಿಲೆಯ ಹಂತ, dialysis ಸ್ಥಿತಿ, ವಯಸ್ಸು ಮತ್ತು ಪೌಷ್ಟಿಕ ಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ಆಹಾರದ ಬದಲಾವಣೆಗಳನ್ನು ವೈದ್ಯರು ಅಥವಾ ಅರ್ಹ ಜು–ಜಣುಣುಚಿಟಿ ಸಲಹೆಯಂತೆ ಮಾಡುವುದು ಸೂಕ್ತ.

"Herbal" ಎಂದರೆ Kidney-safe ಎಂದರ್ಥವಲ್ಲ

"Natural", "Herbal" ಅಥವಾ "Kidney detox" ಎಂಬ ಹೆಸರಿನಲ್ಲಿ ಮಾರಾಟವಾಗುವ ಎಲ್ಲ ಉತ್ಪನ್ನಗಳೂ ಸುರಕ್ಷಿತವೆಂದು ಭಾವಿಸಬಾರದು. ಕೆಲವು ಪೂರಕಗಳು ಅಥವಾ ಅಜ್ಞಾತ ಪದಾರ್ಥಗಳನ್ನು ಹೊಂದಿರುವ ಉತ್ಪನ್ನಗಳು ಮೂತ್ರಪಿಂಡಕ್ಕೆ ಹಾನಿ ಉಂಟುಮಾಡುವ ಸಾಧ್ಯತೆ ಇದೆ.

ಈಗಾಗಲೇ ಮೂತ್ರಪಿಂಡದ ಸಮಸ್ಯೆ ಇರುವವರು ಯಾವುದೇ upplement ಅಥವಾ ಪರ್ಯಾಯ ಔಷಧಿಯನ್ನು ಆರಂಭಿಸುವ ಮೊದಲು ವೈದ್ಯರೊಂದಿಗೆ ಚರ್ಚಿಸುವುದು ಉತ್ತಮ.

**ಯಾರು ವಿಶೇಷವಾಗಿ ಪರೀಕ್ಷೆ ಮಾಡಿಸಿಕೊಳ್ಳಬೇಕು?:** ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿತ ಕಾಯಿಲೆ, ಹಿಂದಿನ ಮೂತ್ರಪಿಂಡ ಸಮಸ್ಯೆ ಅಥವಾ ಕುಟುಂಬದಲ್ಲಿ ಮೂತ್ರಪಿಂಡ ಕಾಯಿಲೆಯ ಇತಿಹಾಸ ಇರುವವರು ತಮ್ಮ ವೈದ್ಯರ ಸಲಹೆಯಂತೆ ಮೂತ್ರಪಿಂಡದ ಕಾರ್ಯವನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡಿಸಿಕೊಳ್ಳಬೇಕು.

ಅಪಾಯದ ಮಟ್ಟಕ್ಕೆ ಅನುಗುಣವಾಗಿ ರಕ್ತದ Creatinine/eGFR ಮತ್ತು ಮೂತ್ರದಲ್ಲಿನ Albumin ಪರೀಕ್ಷೆಗಳನ್ನು ವೈದ್ಯರು ಸೂಚಿಸಬಹುದು.

ಮೂತ್ರಪಿಂಡದ ಕಾಯಿಲೆ ಎಂದರೆ Dialysis ಅನಿವಾರ್ಯವೇ?

ಇಲ್ಲ. Chronic Kidney Disease ಪತ್ತೆಯಾದ ಪ್ರತಿಯೊಬ್ಬರಿಗೂ Dialysis ಅಗತ್ಯವಿರುವುದಿಲ್ಲ. ಆರಂಭಿಕ ಹಂತದಲ್ಲಿಯೇ ಕಾರಣ ಮತ್ತು ಅಪಾಯಕಾರಕ ಅಂಶಗಳನ್ನು ಗುರುತಿಸಿ, ರಕ್ತದೊತ್ತಡ–ಮಧುಮೇಹ ನಿಯಂತ್ರಿಸಿ, ಸೂಕ್ತ ಔಷಧಿ ಮತ್ತು ಜೀವನಶೈಲಿ ಕ್ರಮಗಳನ್ನು ಅನುಸರಿಸುವುದರಿಂದ ಹಲವರಲ್ಲಿ ಕಾಯಿಲೆಯ ಪ್ರಗತಿಯನ್ನು ನಿಧಾನಗೊಳಿಸಲು ಸಾಧ್ಯ.

Dialysis ಅಥವಾ kidney transplantation ಸಾಮಾನ್ಯವಾಗಿ ಮುಂದುವರಿದ kidney failureನ ಆಯ್ದ ಸಂದರ್ಭಗಳಲ್ಲಿ ಪರಿಗಣಿಸಲಾಗುತ್ತದೆ.

**ಮೂತ್ರಪಿಂಡಗಳನ್ನು ರಕ್ಷಿಸಲು ಸರಳ ಸೂತ್ರ:** ರಕ್ತದೊತ್ತಡ ಮತ್ತು ಮಧುಮೇಹವನ್ನು ನಿಯಂತ್ರಿಸಿ. ಧೂಮಪಾನ ಮತ್ತು ತಂಬಾಕಿನಿಂದ ದೂರವಿರಿ. ಆರೋಗ್ಯಕರ ದೇಹತೂಕ ಮತ್ತು ನಿಯಮಿತ ದೈಹಿಕ ಚಟುವಟಿಕೆಗೆ ಆದ್ಯತೆ ನೀಡಿ. ಅನಗತ್ಯ painkillers ಹಾಗೂ ವೈದ್ಯಕೀಯ ಸಲಹೆಯಿಲ್ಲದ supplement ತಪ್ಪಿಸಿ. ಅಪಾಯ ಇರುವವರು ಸಮಯೋಚಿತವಾಗಿ kidney function ಮತ್ತು urine ಪರೀಕ್ಷೆ ಮಾಡಿಸಿಕೊಳ್ಳಿ.

ಸಮಾರೋಪ

ಮೂತ್ರಪಿಂಡದ ಆರೋಗ್ಯದ ಬಗ್ಗೆ ಅತ್ಯಂತ ಮುಖ್ಯವಾದ ಸಂದೇಶವೆಂದರೆ ಕಾಯಿಲೆ ಗಂಭೀರವಾಗುವವರೆಗೆ ಕಾಯಬಾರದು.

ಮೂತ್ರಪಿಂಡದ ಹಾನಿ ಆರಂಭಿಕ ಹಂತದಲ್ಲಿ ಮೌನವಾಗಿರಬಹುದು. ಆದರೆ ಅಪಾಯಕಾರಕ ಅಂಶಗಳನ್ನು ಗುರುತಿಸಿ, ಸೂಕ್ತ ಪರೀಕ್ಷೆಗಳನ್ನು ಮಾಡಿಸಿ ಮತ್ತು ಮಧುಮೇಹ–ರಕ್ತದೊತ್ತಡವನ್ನು ಸರಿಯಾಗಿ ನಿಯಂತ್ರಿಸುವ ಮೂಲಕ ಮೂತ್ರಪಿಂಡದ ಆರೋಗ್ಯವನ್ನು ದೀರ್ಘಕಾಲ ಕಾಪಾಡಿಕೊಳ್ಳಲು ಸಾಧ್ಯ.

"ಮೂತ್ರಪಿಂಡದ ಕಾಯಿಲೆ ನೋವು ಕೊಟ್ಟು ಎಚ್ಚರಿಸುವವರೆಗೆ ಕಾಯಬೇಡಿ; ಅಪಾಯವನ್ನು ಮುಂಚಿತವಾಗಿ ಗುರುತಿಸಿ, ಪರೀಕ್ಷಿಸಿ, ರಕ್ಷಿಸಿ."

# ಆರ್.ಎಂ. ಕುಬೇರಪ್ಪ ನಾಮಪತ್ರ ಸಲ್ಲಿಕೆ ಇಂದು



**ರಾಣೇಬೆನ್ನೂರು:** ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣೆಗೆ, ಅಹಿಂದ ಸಂಘಟನೆಯ ಅಭ್ಯರ್ಥಿಯಾಗಿ ರಾಣೇಬೆನ್ನೂರಿನ ಡಾ. ಆರ್.ಎಂ. ಕುಬೇರಪ್ಪ ಅವರು ಅ. 6ರಂದು ತಮ್ಮ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಲಿದ್ದಾರೆ.

ಪ್ರಕಟಣೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು ಹಾವೇರಿ, ಗದಗ, ಧಾರವಾಡ ಹಾಗೂ ಉತ್ತರಕನ್ನಡ ಜಿಲ್ಲೆಯ ಅವರ ಅನೇಕ ವರ್ಷಗಳ ಅಭಿಮಾನಿಗಳು ಸ್ನೇಹಿತರು ಹಿತೈಷಿ ಬೆಂಬಲಿಗರು, 11 ಗಂಟೆಯೊಳಗೆ ಧಾರವಾಡದ ಡಿ.ಸಿ. ಕಛೇರಿ ಮುಂದೆ ಹಾಜರಿರಲು ಡಾ.ಕುಬೇರಪ್ಪ ಮನವಿ ಮಾಡಿಕೊಂಡಿದ್ದಾರೆ.

ಕಳೆದ 40 ವರ್ಷಗಳಿಗೂ ಹೆಚ್ಚು ಕಾಲ ನಿರಂತರ ಈ ಕ್ಷೇತ್ರ ಸಂಬಂಧವಿಟ್ಟುಕೊಂಡಿರುವ ಡಾ.ಕುಬೇರಪ್ಪ 2004 ರಿಂದ 03 ಬಾರಿ ಶಿಕ್ಷಕರ ಕ್ಷೇತ್ರ 01 ಬಾರಿ ಪದವೀಧರ ಕ್ಷೇತ್ರಕ್ಕೆ ಸ್ಪರ್ಧೆ ಮಾಡಿದ್ದು 28 ತಾಲ್ಲೂಕುಗಳ ಎಲ್ಲ ಹಳ್ಳಿಗಳಲ್ಲಿರುವ ಕಾರ್ಯಕರ್ತರ ಸಂಪರ್ಕವಿದ್ದು ಕಳೆದ 08 ತಿಂಗಳಿಂದ ಕುಬೇರಪ್ಪನವರ ಕಾರ್ಯಕರ್ತರು ಮನೆಮನೆಗೆ ಭೇಟ್ಟಿ ನೀಡಿ ಪದವೀಧರ ಮತದಾರರ ನೋಂದಣಿ ಮಾಡಿಸಿದ್ದಾರೆ.

ಶಿಕ್ಷಕರು ಹಾಗೂ ಪದವೀಧರರ ಅನೇಕ ಸಮಸ್ಯೆಗಳ ಪರವಾಗಿ ನಿರಂತರ ಹೋರಾಟ ಮಾಡಿ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಟ್ಟಿದ್ದಾರೆ. ಈ ಹಿನ್ನಲೆಯಲ್ಲಿ ಕಾಂಗ್ರೆಸ್ ಪಕ್ಷವು ನನ್ನ ಹಿರಿತನ, ಅನುಭವ ಹಾಗೂ ಪಕ್ಷಕ್ಕಾಗಿ ದುಡಿದ ನನ್ನ ಸೇವೆಯನ್ನು ಪರಿಗಣಿಸದೇ ಇರುವುದನ್ನು ಪ್ರತಿಭಟಿಸಿ, ಚುನಾವಣೆಗೆ ಸ್ಪರ್ಧಿಸುತ್ತಿರುವುದಾಗಿ, ಡಾ. ಆರ್.ಎಂ. ಕುಬೇರಪ್ಪ ತಿಳಿಸಿದ್ದು, ಅವರ ಅಪಾರ ಬೆಂಬಲಿಗರು ಎಲ್ಲ ರೀತಿಯಿಂದ ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

# ಪರಿಸರ ಜಾಗೃತಿ ಮೂಡಿಸುವಲ್ಲಿ ಯುವ ಜನರ ಪಾತ್ರ ಪ್ರಮುಖ

**ಧಾರವಾಡ:** ವಿದ್ಯಾರ್ಥಿಗಳು ಪರಿಸರದ ಮಹತ್ವನ್ನು ಅರಿಯುವುದರ ಜೊತೆಗೆ ಪರಿಸರ ಸಂರಕ್ಷಣೆ ಮತ್ತು ಪರಿಸರ ಜಾಗೃತಿ ಮೂಡಿಸುವಲ್ಲಿ ಯುವಜನರ ಪಾತ್ರ ಬಹಳ ಇದೆ ಎಂದು ಧಾರವಾಡ ಎಂದು ಸಾಮಾಜಿಕ ಅರಣ್ಯ ಇಲಾಖೆ ವಲಯ ಅರಣ್ಯಾಧಿಕಾರಿ ಸ್ನೇಹಾ ಕಂಬಳಿ ಅಭಿಪ್ರಾಯಪಟ್ಟರು.

ಅವರು ನಗರದ ಕರ್ನಾಟಕ ವಿಜ್ಞಾನ ಕಾಲೇಜಿನ ಸಸ್ಯಶಾಸ್ತ್ರ ವಿಭಾಗವು ವಿಭಾಗದ ಸಭಾಂಗಣದಲ್ಲಿ ಡಾ.ಜೆ.ಸಿ.ಬೋಸ್ ಸ್ಟಡಿ ಸರ್ಕಲ್ ನ 2026–27ನೇ ಸಾಲಿನ ಶೈಕ್ಷಣಿಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಿಕ್ಷಕರು ವಿದ್ಯಾರ್ಥಿಗಳ ಅಭಿಪ್ರಾಯ, ಸಮಸ್ಯೆಗಳು ಮತ್ತು ಅಗತ್ಯಗಳನ್ನು ತಿಳಿದುಕೊಂಡು ಸೂಕ್ತ ಮಾರ್ಗದರ್ಶನ ನೀಡಬೇಕು. ಶಿಕ್ಷಕರ ಮಾರ್ಗದರ್ಶನದಂತೆ ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು ಎಂದ ಅವರು ವಿದ್ಯಾರ್ಥಿಗಳು ಸಮಾಜದ ಭವಿಷ್ಯದ ಜವಾಬ್ದಾರಿಯುತ ನಾಗರಿಕರಾಗಿರುವುದರಿಂದ ಪರಿಸರ ಮತ್ತು ಅರಣ್ಯ ಸಂರಕ್ಷಣೆಯಲ್ಲಿ ಅವರ ಪಾತ್ರ ಬಹಳ ಮಹತ್ವದ್ದಾಗಿದೆ. ಅರಣ್ಯ ಇಲಾಖೆಯೊಂದಿಗೆ ವಿದ್ಯಾರ್ಥಿಗಳು ಉತ್ತಮ ಸಮನ್ವಯವನ್ನು ಹೊಂದುವುದರಿಂದ ಪರಿಸರ ಸಂರಕ್ಷಣೆಯ ಕಾರ್ಯಗಳು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಯಲು ಸಾಧ್ಯವಾಗುತ್ತದೆ ಎಂದರು.

ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಕೆ. ಕೊಟ್ರೇಶ ಮಾತನಾಡಿ ಸಸ್ಯಗಳು ಮಾನವನ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಅವು ನಮಗೆ ಆಮ್ಲಜನಕ, ಆಹಾರ, ಔಷಧಿ, ನೆರಳು ಹಾಗೂ ಪರಿಸರ ಸಮತೋಲನವನ್ನು ಒದಗಿಸುತ್ತವೆ. ಆದ್ದ–ರಿಂದ ಪ್ರಮುಖ ಸಸ್ಯಗಳ ಸಂರಕ್ಷಣೆ ಮತ್ತು ಬೆಳೆಸುವಿಕೆ ಅತ್ಯಂತ ಅಗತ್ಯವಾಗಿದೆ ಎಂದರು.

ಕರ್ನಾಟಕ ವಿಜ್ಞಾನ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ ಕಿರಣ ಕೋಲ್ಕಾರ ಮಾತನಾಡಿ ವಿದ್ಯಾರ್ಥಿಗಳು ಮತ್ತು ಅರಣ್ಯ ಇಲಾಖೆಯ ನಡುವಿನ ಸಮನ್ವಯವು ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಸಹಾಯಕವಾಗಿದೆ. ಇಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಜವಾಬ್ದಾರಿ ಮತ್ತು ಕಾಳಜಿಯನ್ನು ಬೆಳೆಸಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಪ್ರೊ.ಎಮ್.ಎಸ್.ಸಾಳುಂಕೆ ವಹಿಸಿದ್ದರು. ಸಸ್ಯಶಾಸ್ತ್ರ ವಿಭಾಗದ ಪ್ರೊ ಡೋರಿಸ್ ಎಂ. ಸಿಂಗ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿಗಳು ಹಾಜರಿದ್ದರು.



# ಕೃಷಿ ಪಂಪ್‌ಸೆಟ್‌ಗಳಿಗೆ 7 ಗಂಟೆ ವಿದ್ಯುತ್, ರಾತ್ರಿ ಸಿಂಗಲ್‌ಫೇಸ್ ಪೂರೈಕೆಗೆ ಒತ್ತಾಯ

**ಗಜೇಂದ್ರಗಡ:** ಬರಗಾಲ ಹಾಗೂ ಮಳೆ ಕೊರತೆಯಿಂದ ಬೆಳೆ ನಷ್ಟ ಅನುಭವಿಸಿರುವ ರೈತರಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಆಶಯದಂತೆ ನ್ಯಾಯಯುತ ಹಾಗೂ ಸಮರ್ಪಕ ಬೆಳೆ ಪರಿಹಾರ ನೀಡಬೇಕು. ರೈತರ ಸಾಲ ಮನ್ನಾ ಮಾಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಶ್ರೀ ಕಾಲಕಾಲೇಶ್ವರ ರೈತ ಸಂಘದ ನೇತೃತ್ವದಲ್ಲಿ ರೈತರು ವಿದ್ಯುತ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಬರ ಪರಿಸ್ಥಿತಿಯಲ್ಲಿ ರೈತರ ಸಮಸ್ಯೆ ನಮಗೂ ಅರ್ಥವಾಗಿದೆ. ಸದ್ಯ ಕೃಷಿ ಪಂಪ್‌ಸೆಟ್‌ಗಳಿಗೆ 6 ಗಂಟೆಗಳ ಕಾಲ ವಿದ್ಯುತ್ ಪೂರೈಸಲಾಗುತ್ತಿದೆ. ರೈತರ ಬೇಡಿಕೆಗಳ ಕುರಿತು ಈಗಾಗಲೇ ಮೇಲಾಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದೇವೆ. ಪರಿಸ್ಥಿತಿಯಲ್ಲಿ ಸ್ವಲ್ಪ ಮಳೆಯಾಗಿ ಸುಧಾರಣೆ ಕಂಡುಬಂದರೆ, ರೈತರಿಗೆ ಒದಗಿಸಬೇಕಾದ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.
ನಜ್ಮುನ್ನೀಸಾ. ಕೆ. ಅಧೀಕ್ಷಕ ಅಭಿಯಂತರ ಅಧಿಕಾರಿ ಹೆಸ್ಕಾಂ.




ಪ್ರಸಕ್ತ ಸಾಲಿನಲ್ಲಿ ಸಮರ್ಪಕ ಮಳೆಯಾಗದೆ ಬರಗಾಲ ಹಾಗೂ ಹವಾಮಾನ ವೈಪರೀತ್ಯದಿಂದ ಬೆಳೆಗಳು ಸಂಪೂರ್ಣ ಅಥವಾ ಭಾಗಶಃ ಹಾನಿಗೊಳಗಾಗಿವೆ. ಬೀಜ, ಗೊಬ್ಬರ, ಔಷಧ, ಕೂಲಿ ಸೇರಿದಂತೆ ಕೃಷಿಗೆ ಮಾಡಿದ ವೆಚ್ಚವನ್ನೂ ಮರಳಿ ಪಡೆಯಲಾಗದ ಸ್ಥಿತಿ ನಿರ್ಮಾಣವಾಗಿದ್ದು, ರೈತರು ಬ್ಯಾಂಕ್ ಹಾಗೂ ಖಾಸಗಿ ಸಾಲದ ಹೊರೆಗೆ ಸಿಲುಕಿದ್ದಾರೆ. ಹೀಗಾಗಿ ನಷ್ಟಕ್ಕೊಳಗಾದ ರೈತರಿಗೆ ಸಮರ್ಪಕ ಪರಿಹಾರ ಒದಗಿಸುವ ಜತೆಗೆ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ಕೃಷಿ ಉತ್ಪಾದನಾ ವೆಚ್ಚದ ಮೇಲೆ ಶೇ.50ರಷ್ಟು ಲಾಭಾಂಶ ಸೇರಿಸಿ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು ಎಂಬ ಸ್ವಾಮಿನಾಥನ್ ಆಯೋಗದ ಶಿಫಾರಸಿನ ಆಶಯವನ್ನು ಸರ್ಕಾರ ಜಾರಿಗೊಳಿಸಬೇಕು ಎಂದು ರೈತರು ಮನವಿ ಮಾಡಿದರು.

**ವಿದ್ಯುತ್ ಪೂರೈಕೆಗೆ ಒತ್ತಾಯ:** ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿದಿನ ಕನಿಷ್ಠ 7 ಗಂಟೆಗಳ ಗುಣಮಟ್ಟದ ವಿದ್ಯುತ್ ಪೂರೈಸಬೇಕು. ರೈತರಿಗೆ ಅನುಕೂಲವಾಗುವಂತೆ ಸಂಜೆ 6ರಿಂದ ಬೆಳಿಗ್ಗೆ 6ರವರೆಗೆ ಸಿಂಗಲ್‌ಫೇಸ್ ವಿದ್ಯುತ್ ಪೂರೈಕೆ ವ್ಯವಸ್ಥೆ ಕಲ್ಪಿಸಬೇಕು ಎಂದು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ರಾತ್ರಿ ವೇಳೆ ವಿದ್ಯುತ್ ಪೂರೈಕೆಯಾಗುವುದರಿಂದ ರೈತರು ಕಾಡುಪ್ರಾಣಿಗಳು ಹಾಗೂ ವಿಷಜಂತುಗಳ ಭೀತಿಯ ನಡುವೆಯೇ ಹೊಲಗಳಿಗೆ ತೆರಳಿ ಪಂಪ್‌ಸೆಟ್‌ಗಳನ್ನು ಚಾಲನೆ ಮಾಡಬೇಕಾಗಿದೆ. ಹೀಗಾಗಿ ರೈತರ ಸುರಕ್ಷತೆಯ ದೃಷ್ಟಿಯಿಂದ ವಿದ್ಯುತ್ ಪೂರೈಕೆಯ ವೇಳಾಪಟ್ಟಿಯನ್ನು ಅನುಕೂಲಕರವಾಗಿ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಪರಶುರಾಮ ರಾಠೋಡ, ಹುಸೇನಸಾಬ ನೀಶಾಂದಾರ, ನಾರಾಯನಪ್ಪ ರಾಠೋಡ, ರೂಪೇಶ ಮಾಳೋತ್ತರ, ಈರಪ್ಪ ರಾಠೋಡ, ಪೀರು ರಾಠೋಡ, ಬಾಲು ರಾಠೋಡ, ಡಿ. ಜಿ. ಕಟ್ಟಿಮನಿ, ಬಸವರಾಜ ಬಂಕದ, ಚಂದ್ರು ರಾಠೋಡ ಸೇರಿದಂತೆ ಗಜೇಂದ್ರಗಡ ಸುತ್ತಮುತ್ತಲಿನ ಗ್ರಾಮಸ್ಥ ರೈತರು ಇದ್ದರು.

# ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳು ಹುಟ್ಟುವಳಿ ಖರೀದಿಗೆ ಬೆಂಬಲ ಬೆಲೆ ನಿಗದಿ: ಡಿಸಿ

**ಗದಗ:** 2026–27 ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳು ಹುಟ್ಟುವಳಿ ಖರೀದಿಸಲು ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ನೋಂದಣಿ ಪ್ರಕ್ರಿಯೆಯಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಅವರು ತಿಳಿಸಿದರು.

ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ 2026–27 ನೇ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಹೆಸರುಕಾಳು ಖರೀದಿಸುವ ಕುರಿತು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ತೆರೆಯಲಾಗುವ ಹೆಸರುಕಾಳು ಹುಟ್ಟುವಳಿ ಖರೀದಿ ಕೇಂದ್ರಗಳಲ್ಲಿ ಖರೀದಿಸಲಾಗುವ ಎಫ್. ಎ ಕ್ಯೂ ಗುಣಮಟ್ಟ ಪರಿಶೀಲನೆಗೆ ಗ್ರೇಡರ್‌ಗಳನ್ನು ನೇಮಕ ಮಾಡಬೇಕು ಮತ್ತು ಅವರಿಗೆ ಎಫ್‌ಎಕ್ಯೂ ಗ್ರೇಡಿಂಗ್ ತರಬೇತಿ ನೀಡಬೇಕು. ಜಿಲ್ಲೆಯ ಪ್ರತಿ ರೈತರಿಂದ ಪ್ರತಿ ಎಕರೆಗೆ 04 ಕ್ವಿಂಟಾಲ್ ಗರಿಷ್ಠ ಪ್ರಮಾಣ ಹಾಗೂ ಪ್ರತಿ ರೈತ–ರಿಂದ ಗರಿಷ್ಟ 20 ಕ್ವಿಂಟಾಲ್ ಹೆಸರುಕಾಳು ಖರೀದಿಸಬೇಕು.



ಬೆಂಬಲ ಬೆಲೆಯಲ್ಲಿ ಹೆಸರು ಕಾಳು ಹುಟ್ಟುವಳಿ ಖರೀದಿಯ ಕುರಿತು ರೈತರಿಗೆ ತಿಳುವಳಿಕೆ ನೀಡಲು ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ಜಿಲ್ಲಾಕಾರಿ ಸಿ.ಎನ್.ಶ್ರೀಧರ್ ಸೂಚಿಸಿದರು.

ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರಾದ ಸುಧಾ ಆರ್ ಬಂಡಿ ಅವರು ಮಾತನಾಡಿ ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳು ಹುಟ್ಟುವಳಿಗೆ ಪ್ರತಿ ಕ್ವಿಂಟಾಲ್‌ಗೆ 8780 ರೂ ಗಳಂತೆ ನಿಗದಿಪಡಿಸಲಾಗಿದೆ. ಸರ್ಕಾರದ ಆದೇಶದನುಸಾರ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಸದರಿ ಆದೇಶ ಹೊರಡಿಸಿದ ದಿನಾಂಕದಿಂದ ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗದಿಪಡಿಸಿದ್ದು, ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆಯನ್ನು ಸಹ ಪ್ರಾರಂಭಿಸಿ, ರಾಜ್ಯದಲ್ಲಿ ಮಾರ್ಕಫೆಡ್ ಸಂಸ್ಥೆಯ ಮೂಲಕ ಖರೀದಿಸಲು ಆದೇಶಿಸಲಾಗಿರುತ್ತದೆ ಎಂದು ತಿಳಿಸಿದರು.

ಜಿಲ್ಲೆಯ 59 ಕಡೆಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಕೃಷಿ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ತೋಟಗಾರಿಕೆ ಇಲಾಖೆ, ಸಹಕಾರಿ ಸಂಘಗಳ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

SAMALOCHANE RANEBENNURSUDDI KANNADA DAILY MORNING, OWNER, PUBLISHER BY: RAJESHWARI S OLEKAR, PUBLISHED FROM: H.NO, 58 MAIN ROAD, YAKALASAPUR, SUB DISTRICT RANEBENNUR, HAVERI, KARNATAKA-581115, PRINTED AT: VEDAMURTHY S T, GAYATHRI PUBLICATIONS, H.NO, 720, NEKAR COLONY, INDUSTRIAL AREA, HAVERI, KARNATAKA- 581115, EDITOR BY: RAJESHWARI S OLEKAR